ಈ ಸಮಿತಿಯು ಅತ್ಯುನ್ನತ ಸಮಿತಿಯಾಗಿದ್ದು, ಈ ಪರೀಕ್ಷೆಗಳ ಸಂಬಂಧದಲ್ಲಿ ವಸೂಲಿ ಮಾಡಿದ ಹಣದ ಅವ್ಯವಹಾರದ ಬಗ್ಗೆ ಯಾವುದೇ ನಿರ್ದಿಷ್ಟವಾದ ದೂರು ಸರ್ಕಾರಕ್ಕೆ ಬಂದಿಲ್ಲ. ಒಂದು ವೇಳೆ, ನಿರ್ದಿಷ್ಟವಾದ ದೂರು ಆ ಸಂದರ್ಭದಲ್ಲಿ ಸರ್ಕಾರದ ಗಮನಕ್ಕೆ ಬಂದರೆ, ಅವುಗಳ ಬಗ್ಗೆ ತನಿಖೆ ಮಾಡಿಸಲಾಗುವುದು.

4. ಸರ್ಕಾರಿ ಎಸ್.ಜಿ. ಪಾಲಿಟೆಕ್ನಿಕ್, ಬೆಂಗಳೂರು, ಇಲ್ಲಿನ ಕೆಮಿಕಲ್ ವಿಭಾಗಕ್ಕೆ ಉಪಕರಣಗಳನ್ನು ಖರೀದಿಸುವಲ್ಲಿ ಅವ್ಯವಹಾರ ಆಗಿದೆ ಎಂಬ ಆಪಾದನೆಯ ಬಗ್ಗೆ

ಈ ವಿಷಯದ ಬಗ್ಗೆ ಪೂರ್ವಭಾವಿ ತನಿಖೆಯನ್ನು ಮಾಡಲು ನಿರ್ದೇಶನಾಲಯ ಉಪ ನಿರ್ದೇಶಕರೊಬ್ಬರನ್ನು ನೇಮಿಸಲಾಯಿತು. ಅವರು ಕೊಟ್ಟ ವರದಿಯಂತೆ ಕೆಮಿಕಲ್ ಇಂಜಿನಿಯರಿಂಗ್ ವಿಷಯದಲ್ಲಿ ಪರಿಣಿತರನ್ನು ನೇಮಿಸಿ, ಪೂರ್ಣ ವರದಿಯನ್ನು ಪಡೆಯಲಾಯಿತು. ಇವರ ವರದಿ ಪ್ರಕಾರ, ಖರೀದಿಸಿರುವ ಉಪಕರಣಗಳ ಬೆಲೆ ಮಾರುಕಟ್ಟೆಯ ಬೆಲೆಗಿಂತ ಬಹಳ ಜಾಸ್ತಿ ಇದೆ ಎಂದು ಅಭಿಪ್ರಾಯ ಪಟ್ಟಿದ್ದಾರೆ. ಉಪಕರಣಗಳನ್ನು ಎಸ್.ಪಿ.ಡಿ. ಮೂಲಕ ಖರೀದಿಸಿರುವುದರಿಂದ ವಿಚಾರಣೆಯನ್ನು ಸ್ವತಂತ್ರ ಪ್ರಾಧಿಕಾರ ಹೊಂದಿರುವ ಲೋಕಾಯುಕ್ತದ ತನಿಖೆಗೆ ಒಳಪಡಿಸುವುದು ಸೂಕ್ತವೆಂದು ಅಭಿಪ್ರಾಯ ಪಡಲಾಗಿದೆ ಮತ್ತು ಇದಕ್ಕೆ ಸಂಬಂಧಪಟ್ಟ ಅಧಿಕಾರಿಯನ್ನು ಅಮಾನತ್ತಿನಲ್ಲಿಡಲು ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಪ್ರೊ. ಎಂ.ಡಿ. ನಂಜುಂಡಸ್ವಾಮಿ : ಮಾನ್ಯ ಸಭಾಧ್ಯಕ್ಷಣಿಯವರೇ, ಸನ್ಮಾನ್ಯ ಶಿಕ್ಷಣ ಮಂತ್ರಿಗಳು ಅವರ ಹೇಳಿಕೆಯಲ್ಲಿ ಅಕೌಂಟೆಂಟ್ ಜನರಲ್‌ರವರ ವರದಿಯನ್ನು ನಿರೀಕ್ಷಿಸುತ್ತಿದ್ದೇವೆ ಎಂದು ಹೇಳಿದರು. ನನ್ನ ಕೈಯಲ್ಲಿದೆ.

ಈಗಿರುವ ಮಾಹಿತಿ ಪ್ರಕಾರ ನಿಮಗೆ ಮೊನ್ನೆ ಬಂತು, ನನಗೆ ನಿನ್ನೆ ತಲುಪಿತು. ರಾತ್ರಿ ನಾನು ಎಲ್ಲಾ ಒಟ್ಟಿಗೆ ಲೆಕ್ಕ ಮಾಡಿದೆ. 53 ಲಕ್ಷ ರೂಪಾಯಿಯ ಅವ್ಯವಹಾರ ಆಗಿದೆ. ಇದಕ್ಕೆ ನೇರವಾಗಿ ಸಂಬಂಧಪಟ್ಟವರಲ್ಲಿ ಕೇವಲ ಇಬ್ಬರನ್ನು ಮಾತ್ರ ತಾವು ಅಮಾನತ್ತಿನಲ್ಲಿಟ್ಟಿದ್ದೀರಿ. ಎಸ್.ಎಂ.ಗುರುಲಿಂಗಸ್ವಾಮಿ, ಕ್ಯಾಷ್ ಸೂಪರಿಂಟೆಂಡೆಂಟ್, ಕೆ.ಆರ್. ಶ್ರೀನಿವಾಸರಾವ್, ಕ್ಯಾಷ್ ಸೂಪರಿಂಟೆಂಡೆಂಟ್. ಇದಕ್ಕಿಂತಲೂ ದೊಡ್ಡದಾಗಿ ನೇರ ಸಂಬಂಧ ಇದ್ದವರು ಇನ್ನೂ ಮೂರು ಜನ ಇದ್ದಾರೆ. ಅದರಲ್ಲಿ ಬಹಳ ಮುಖ್ಯವಾಗಿ ಮಾಡಿದವರು ಈಗ ನಿವೃತ್ತರಾಗಿದ್ದಾರೆ. ಬಿ.ಎನ್.ಕೃಷ್ಣಮೂರ್ತಿ, ಫಾರ್ಮರ್‌ಲಿ ಡೈರೆಕ್ಟರ್ ಆಫ್ ಟೆಕ್ನಿಕಲ್ ಎಜುಕೇಷನ್, ಎರಡನೆಯವರು ಎಂ.ನಾಗರಾಜರಾವ್, ಡೆಪ್ಯುಟಿ ಡೈರೆಕ್ಟರ್, ಮೂರನೆಯವರು ರಂಗಸ್ವಾಮಿಗೌಡ, ಕೆಮಿಕಲ್ ಇಂಜಿನಿಯರ್ ವಿಭಾಗ, ಇನ್ನೊಬ್ಬರು ಕೆ.ವಿ.ನಂಜುಂಡೇಗೌಡ, ಎಸ್.ಜೆ.ಪಾಲಿಟೆಕ್ನಿಕ್, ಬೆಂಗಳೂರು. ಈ 53 ಲಕ್ಷ ರೂಪಾಯಿಯ ದುರುಪಯೋಗದಲ್ಲಿ ಇವರೆಲ್ಲರೂ ಭಾಗಿಗಳಾಗಿದ್ದಾರೆ. ಇವರನ್ನು ಕೂಡಲೇ ಅಮಾನತ್ತಿನಲ್ಲಿಡಬೇಕು. ನಿವೃತ್ತಿಯಾಗಿರುವಂಥ ಕೃಷ್ಣಮೂರ್ತಿಯ ಬಗ್ಗೆಯೂ ತಾವು ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳಬೇಕು. ಇದು ನನ್ನ ಒತ್ತಾಯ. ಇದರ ಬಗ್ಗೆ ತಾವು ಏನು ಮಾಡುತ್ತೀರಿ?

+ ಶ್ರೀ ಹೆಚ್. ವಿಶ್ವಾಂತಯ್ಯ : ನಾನು ನಿನ್ನೆ ದಿವಸ ಭಾಷಣ ಮಾಡಬೇಕಾದರೆ ಇದರ ಬಗ್ಗೆ ಪ್ರಸ್ತಾಪ ಮಾಡಿದೆ. ಆಡಿಟ್ ರಿಪೋರ್ಟ್ ಬಗ್ಗೆ ತಮ್ಮ ಗಮನಕ್ಕೆ ತರುವುದೇನೆಂದರೆ, ಈ ಆಡಿಟ್ ರಿಪೋರ್ಟ್ ಬರುವುದಕ್ಕಿಂತ ಮುಂಚೆ ಆಡಿಟ್ ಎನ್‌ಕ್ವೈರಿ ಏನು ಮಾಡುತ್ತಾರೆ ಆಗ ಎ.ಜಿ.ಯವರ ಪಾರ್ಟಿಯವರು ಸಂಬಂಧಪಟ್ಟಂಥ ಇಲಾಖೆಯ ಮುಖ್ಯಸ್ಥರಿಗೆ ಅಥವಾ ಕಛೇರಿಯ ಮುಖ್ಯಸ್ಥರಿಗೆ ಇದರ ವರದಿಯನ್ನು ಕೊಡುತ್ತಾರೆ. ಹೌದಾ ಸ್ವಾಮಿ? ಅದು ತಮಗೆ ಮಾಹಿತಿ ಬಂದ ಹಾಗೆ ಅಲ್ಲವೇ? ಅವರು ಕೊಟ್ಟಂಥ ಮಾಹಿತಿ ಪ್ರಕಾರ, 45ಲಕ್ಷ ರೂಪಾಯಿಗಳಿಗೂ ಹೆಚ್ಚು ಹಣ

ದುರುಪಯೋಗವಾಗಿದೆ ಎನ್ನುವುದು ಒಂದು. ಎರಡನೆಯದಾಗಿ, ಅವರು ಒಪ್ಪಿಕೊಂಡಹಾಗೆ, ಇವತ್ತಿನದಿವಸ ಒಂದು ಲಕ್ಷ ರೂಪಾಯಿ ಬಿಲ್ಲರೆ ಹಣ ದುರುಪಯೋಗವಾದರೆ ನಮ್ಮ ಕರ್ನಾಟಕ ಫೈನಾನ್ಸಿಯಲ್ ಕೋಡ್‌ನಲ್ಲಿ ಏನು ಹೇಳುತ್ತದೆ ಸ್ವಾಮಿ? ಸಂಬಂಧಪಟ್ಟ ಇಲಾಖೆಯ ಮುಖ್ಯಸ್ಥ ಕೂಡಲೇ ಪೋಲೀಸರಿಗೆ ದೂರನ್ನು ಕೊಡಬೇಕು ಎಂದು ನಿಯಮ ಇದೆ. ಹೌದಾ? ಈ ರೀತಿಯಲ್ಲಿ ನಿಯಮ ಇದ್ದರೆ ಅಲ್ಲಿರುವಂಥ ಮುಖ್ಯಸ್ಥ ಸಂಬಂಧಪಟ್ಟವರ ಮೇಲೆ ಈ ರೀತಿ ಹಣ ದುರುಪಯೋಗವಾಗಿದೆ, ಮಿಸ್-ಅಪ್ರೋಪ್ರಿಯೇಷನ್ ಆಫ್ ಗೌರ್ಮೆಂಟ್ ಫಂಡ್ಸ್ ಆಗಿದೆ ಎಂದು ಅವರೇನಾದರೂ ದೂರನ್ನು ಕೊಟ್ಟಿದ್ದಾರೆಯೇ? ಕೊಟ್ಟಿಲ್ಲ. ನಾನೇ ಉತ್ತರವನ್ನು ಹೇಳುತ್ತೇನೆ. ಏತಕ್ಕೆ ಸ್ವಾಮಿ? ರಕ್ಷಣೆ ಮಾಡಲಿಕ್ಕಾ? ನೀವು ಕೊಟ್ಟಿಲ್ಲದಿದ್ದರೆ ಕರ್ನಾಟಕ ಫೈನಾನ್ಸಿಯಲ್ ಕೋಡ್ ಪ್ರಕಾರ ದೂರು ಕೊಡಬೇಕು ಎಂಬ ನಿಯಮ ಇದ್ದರೆ ಮೊಟ್ಟಮೊದಲು ಅವರ ಮೇಲೆ ತಾವು ಕ್ರಮವನ್ನು ತೆಗೆದುಕೊಳ್ಳಬೇಕು. ಯಾರು ಸಂಬಂಧಪಟ್ಟಂಥ ಅಧಿಕಾರಿ ಇದ್ದಾರೆ, ಅವರನ್ನು ನೀವು ಅಮಾನತ್ತಿಲ್ಲಿಟ್ಟರೆ ಇಲ್ಲಿ ಬೇರೆ ಯಾರೂ ಶಾಮೀಲಾಗಿಲ್ಲ ಎಂದು ಅರ್ಥವಾಗುತ್ತದೆ. ಇಲ್ಲದಿದ್ದರೆ ಏನು ಅರ್ಥವಾಗುತ್ತದೆ, ಅದು ಒಂದು.

ಎರಡನೆಯದಾಗಿ, ಎಂಟರೆನ್ಸ್ ಫೀ ಬಗ್ಗೆ ಹೇಳಿದ್ದೀರಿ. ರಾಜ್ಯ ಲೆಕ್ಕ ಪತ್ರ ಇಲಾಖೆಯ ಅಧಿಕಾರಿಯವರಿಂದ ಇಂಟರ್‌ನಲ್ ಆಡಿಟ್ ಆಗಿದೆ ಎಂದು ಹೇಳಿದ್ದೀರಿ. ನಾನು ಕೇಳುವುದೇನೆಂದರೆ, ಎಜಿಯವರು ಇದನ್ನು ಮಾಡಲಿಕ್ಕೆ ಅಧಿಕಾರ ಇದೆಯೋ ಇಲ್ಲವೋ? ಎ.ಜಿ.ಯವರ ಪಾರ್ಟಿಯವರು ಇದನ್ನು ಆಡಿಟ್ ಮಾಡುವುದಕ್ಕೆ ಪುಸ್ತಕ ಕೊಡಿ ಎಂದರೆ, ಇದು ನಿಮ್ಮ ವ್ಯಾಪ್ತಿಗೆ ಬರುವುದಿಲ್ಲ ಎನ್ನುವ ಉದ್ಧಟತನದ ಮಾತನ್ನು ಸಂಬಂಧಪಟ್ಟ ಇಲಾಖೆಯವರು ಹೇಳಿದ್ದಾರೆ. ಇದಕ್ಕೆ ತಾವು ಉತ್ತರ ಹೇಳಬೇಕು.

ಪ್ರೊ : ಎಂ.ಡಿ. ನಂಜುಂಡಸ್ವಾಮಿ : ಅಕೌಂಟೆಂಟ್ ಜನರಲ್‌ರವರ ವರದಿಯನ್ನು ಕಳುಹಿಸಿ ಕೊಡುತ್ತೇನೆ.

ಶ್ರೀ ಹೆಚ್. ಏಕಾಂತಯ್ಯ : ನೀವು ರೂಪಿಸಿದಂತಹ ನಿಯಮಗಳ ರೀತ್ಯ ಯಾವತ್ತು ಆಡಿಟ್ ಮಾಡಿರುತ್ತಾರೆ ಅವತ್ತೇ ಅದನ್ನೆಲ್ಲಾ ಕೊಟ್ಟಿರುತ್ತಾರೆ. ಅದು ತಮಗೆ ಬಂದ ಮಾಹಿತಿ ಆಗಲಿಲ್ಲವೆ?

ಶ್ರೀ ಎಂ. ವೀರಪ್ಪ ಮೊಯಿಲಿ : ಪ್ರೊ :ನಂಜುಂಡಸ್ವಾಮಿಯವರು ಹೇಳಿದ ಪ್ರಕಾರ 50 ಲಕ್ಷಕ್ಕಿಂತಲೂ ಹೆಚ್ಚು ಅವ್ಯವಹಾರವಾಗಿದೆ. ಅಕೌಂಟೆಂಟ್ ಜನರಲ್‌ರವರು ಏನು ಕಳುಹಿಸಿದ್ದಾರೆ ಅದರ ಪ್ರಕಾರ ನಮಗೆ ಬಂದಿದೆ. ಈಗ ನೀವು ಇದಕ್ಕೆ ನೇರ ಸಂಬಂಧಪಟ್ಟವರು ಯಾರ್ಯಾರು ಎಂದು ಕೆಲವು ಹೆಸರುಗಳನ್ನು ಹೇಳಿದ್ದೀರಿ. ನಾವು ಈಗ ಯಾರನ್ನು ಅಮಾನತ್ತಿನಲ್ಲಿ ಇಟ್ಟಿದ್ದೇವೆ ಅವರ ಬಗ್ಗೆ ನಾವು ಸರಿಯಾದಂತಹ ವೆರಿಫಿಕೇಷನ್ ಮಾಡಿ ಪ್ರೈಮಾಫೇಸಿ, They are responsible ಎಂದು ಸರ್ಕಾರ ನಿರ್ಣಯಕ್ಕೆ ಬಂದು ಅವರನ್ನು ಅಮಾನತ್ತಿನಲ್ಲಿಟ್ಟಿದೆ. ಇನ್ನು ಈ ನಾಲ್ಕು ಜನ ಕೂಡ ಪ್ರೈಮಾಫೆಸಿ If they are also responsible for this according to you, we will not hesitate to keep them under suspension within a couple of days, even tomorrow. I will not hesitate because we are not going to sheild anyone. ನಾನು ಕೂಡ ಅದನ್ನು ನೋಡಿದ ಮೇಲೆ ಪೂರ್ತಿಯಾಗಿ ನಿರ್ಣಯಕ್ಕೆ ಬರಲಿಕ್ಕೆ ಆಗಿದಿದ್ದ ಕಾರಣ We could not do it. We may do it any time. suppose I get into that document , audit report-we will keep them under suspension even tomorrow, even to-day, the action which we will not hesitate

to take. ಇನ್ನು ಎರಡನೆಯದು ಅಡಿಟ್ ಪ್ಯಾರಾ ತಾವು ಹೇಳಿದ್ದು ಸರಿ. ಆ ಆಡಿಟ್ ಪ್ಯಾರಾಗಳು ಆಯಾಯ ಇಲಾಖೆಯ ಪ್ರತಿಕ್ರಿಯೆಗೆ ಅದು ಬರುತ್ತದೆ. ಬಂದಮೇಲೆ ಅದನ್ನು ಪ್ರತಿಕ್ರಿಯೆಗೆ ಹಾಕಿ ಅದನ್ನು ಪುನಃ ಅಕೌಂಟೆಂಟ್ ಜನರಲ್‌ಗೆ ಕಳುಹಿಸುತ್ತಾರೆ. ಅಕೌಂಟಂಟ್ ಜನರಲ್‌ರವರು ಅಂತಿಮವಾದಂತಹ ವರದಿಯನ್ನು ಕಳುಹಿಸುತ್ತಾರೆ. ಅಂತಿಮವಾದಂತಹ ವರದಿ ಬಂದಿದೆಯೇ ಎಂದು ಈಗಲೂ ನಾನು ವಿಚಾರಿಸಿದೆ, ನನಗೆ ಬಂದ ವರ್ತಮಾನದ ಪ್ರಕಾರ ಅದು ಬಂದಿಲ್ಲ.

(ಶ್ರೀ ಜಿ.ಎಸ್. ಆಚಾರ್‌ರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

Anyway ತಾವು ಹೇಳಿದ ಪ್ರಕಾರ, I will make some more enquiry if possible.

ಅಕೌಂಟೆಂಟ್ ಜನರಲ್ ಆಫೀಸ್‌ನವರನ್ನು ಕಾನ್‌ಟ್ಯಾಕ್ಟ್ ಮಾಡುತ್ತೇವೆ. ವರದಿ ಬಂದರೆ ಇದರ ಬಗ್ಗೆ ಮತ್ತಷ್ಟು ವಿಚಾರಣೆ ಮಾಡುವುದಕ್ಕೆ ಅನುಕೂಲವಾಗುತ್ತದೆ. ಎಂಟರೆನ್ಸ್ ಫೀಸ್ ಬಗ್ಗೆ ನಾನು ಮೊನ್ನೆ ಉತ್ತರ ಕೊಟ್ಟಿದ್ದೇನೆ. ಏಕೆಂದರೆ, ಅಕೌಂಟೆಂಟ್ ಜನರಲ್‌ರವರಿಗೆ ಅದನ್ನು ಒಪ್ಪಿಸುವುದರಲ್ಲಿ ಏನೂ ಆತಂಕ ಇಲ್ಲ. I am going to entrust that to A.G. Only thing I have not mentioned in that statement as far as criminal case, I do agree with you that we can proceed against them in the criminal side also.

SRI H .EKANTHAIAH : Action against the Head of the Department also should be taken immediately.

SRI M. VERRAPPA MOILY : That I will make an enquiry . We will proceed against them immediately.

ಪ್ರೊ : ಎಂ.ಡಿ.ನಂಜುಂಡಸ್ವಾಮಿ : ಇವತ್ತು ಅಥವಾ ನಾಳೆ ಕ್ರಮ ತೆಗೆದುಕೊಳ್ಳುತ್ತೇವೆಂದರೆ ಬಹಳ ಸಂತೋಷವಾಗುತ್ತದೆ. ಏಕೆಂದರೆ, ಇದು ಕೇವಲ 120 ಲಕ್ಷ ರೂಪಾಯಿ ವ್ಯವಹಾರದಲ್ಲಿ 60 ಲಕ್ಷ ರೂಪಾಯಿಯನ್ನು ತಿಂದರತಕ್ಕಂತಹ ವ್ಯಕ್ತಿಗಳು ಇವರು. ಈಗ 50 ಕೋಟಿ ರೂಪಾಯಿಗಳ ವರ್ಲ್ಡ್ ಬ್ಯಾಂಕ್ ಕಾರ್ಯಕ್ರಮ ಇದೆ. ಅದರಲ್ಲಿ 25 ಕೋಟಿ ರೂಪಾಯಿಗಳನ್ನೇ ತಿನ್ನುವಂತಹ ದಕ್ಷತೆ ಇರುವವರು. ಆದ್ದರಿಂದ ಇವತ್ತು ನಾಳೆಯಲ್ಲಿ ಇದನ್ನು ತಾವು ಮಾಡಬೇಕು.

ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸುವ ವಂದನಾ ನಿರ್ಣಯದ ಮೇಲಿನ ಚರ್ಚೆ (ಮುಂದುವರಿದದು)

+ ಶ್ರೀ ಎಸ್.ಹೆಚ್. ಕೌಜಲಗಿ : (ಬೈಲಹೊಂಗಲ್) ಸನ್ಮಾನ್ಯ ಅಧ್ಯಕ್ಷರೆ, 1991ನೇ ಇಸವಿ ಮಾರ್ಚ್ ಒಂದರಂದು ರಾಜ್ಯಪಾಲರು ಭಾಷಣವನ್ನು ಮಂಡಿಸಿದ್ದಕ್ಕೆ ನನ್ನ ವಿರೋಧವನ್ನು ವ್ಯಕ್ತಪಡಿಸುತ್ತಾ, ನನ್ನ ಕೆಲವು ಸಲಹೆಗಳನ್ನು ತಮ್ಮ ಮುಂದಿಡ ಬೇಕೆಂದು ಬಯಸುತ್ತೇನೆ. ಆವೊತ್ತಿನ ದಿನಸ ನಾವು ಒಂದು ತಿಳಿದುಕೊಂಡಿದ್ದೆವು. ಅದೇನೆಂದರೆ, ರಾಜ್ಯದಲ್ಲಿ ಹೊಸ ಮುಖ್ಯ ಮಂತ್ರಿಗಳು ಬಂದಿದ್ದಾರೆ. ಅದರಲ್ಲಿಯೂ ಹಿಂದುಳಿದ ಜನಾಂಗದವರೊಬ್ಬರು ಮುಖ್ಯಮಂತ್ರಿಗಳಾಗಿದ್ದರೆ, ಇವತ್ತಿನ ದಿವಸ ಈ ರಾಜ್ಯಪಾಲರ ಭಾಷಣದಲ್ಲಿ ಕೆಲವೊಂದು ಹೊಸದನ್ನು ನಾವು ಕಾಣಬಹುದೆಂದು ಇದ್ದೆವು ಆದರೆ ಅದನ್ನು ಓದಿದಾಗ, ಇಷ್ಟೊಂದು ಅಘಾತ ಎನಿಸಿತು. ಅದರಲ್ಲಿ ಯಾವುದೇ ಹೊಸತನವನ್ನು ಕಾಣದೆ, ಸಪ್ಪೆಯಾದಂಥ ಭಾಷಣವನ್ನು ರಾಜ್ಯಪಾಲರ ಬಾಯಿಂದ ಸರ್ಕಾರದವರು ಹೇಳಿಸಿದ್ದಾರೆ ಎಂದು ಅನಿಸಿತು. ನಾನು ಹೆಚ್ಚಿಗೆ ಸಮಯ ತೆಗೆದುಕೊಳ್ಳದೇ ಎರಡೇ ಎರಡು ಮಾತುಗಳನ್ನು ಹೇಳುತ್ತೇನೆ. ಮೊದಲನೆಯದಾಗಿ

ಹೇಳಬೇಕೆಂದರೆ, ಶ್ರೀಮಾನ್ ವೀರೇಂದ್ರಪಾಟೀಲರು ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಲಿಯನ್ನು ನೇಮಿಸಿದರು. ಇವೊತ್ತಿನ ದಿವಸ ಶ್ರೀಮಾನ್ ಬಂಗಾರಪ್ಪನವರು ಮಾನ್ಯ ಮುಖ್ಯ ಮಂತ್ರಿಗಳಾಗಿದ್ದಾರೆ. ಮಲೆನಾಡು ಪ್ರದೇಶದ ಅಭಿವೃದ್ಧಿಗಾಗಿ ಮಂಡಲಿಯನ್ನು ಸ್ಥಾಪಿಸಲು ನಿರ್ಧರಿಸಿ ಎಂದು ಹೇಳಿದ್ದಾರೆ. ಆದರೆ ಅಗದಿ ಇವೊತ್ತಿನ ದಿವಸ ಉತ್ತರ ಕರ್ನಾಟಕದ ಬಗ್ಗೆ ಯಾರೂ ಕೇಳುವವರು ಇಲ್ಲ ಎಂದು ಆಘಾತವಾಗಿದೆ ಎಂದು ತಿಳಿಯಪಡಿಸುತ್ತಿದ್ದೇನೆ. ಉತ್ತರ ಕರ್ನಾಟಕ ಭಾಗದ ಎಲ್ಲಾ ನೀರಾವರಿ ಯೋಜನೆಗಳಿಗೂ ಹೆಚ್ಚಿನ ಆದ್ಯತೆ ನೀಡಲು ನಿರ್ದೇಶಿಸಲಾಗುವುದು ಎಂದು ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದಾರೆ. ಆದರೆ ಇವೊತ್ತಿನದಿವಸ ತಮ್ಮ ಮುಂದೆ ಹೇಳುವುದೇನೆಂದರೆ, 1990-91ರ ಆಯವ್ಯಯಪಟ್ಟಿಯಲ್ಲಿ 528ಲಕ್ಷರೂಪಾಯಿಗಳನ್ನು ಕಾಡಾ, ಮಲಪ್ರಭ, ಘಟಪ್ರಭ ಪ್ರಾಜೆಕ್ಟ್‌ಗಳಿಗೆ ಇಡಲಾಗಿದ್ದರೂ ಇವೊತ್ತಿನವರೆಗೂ ಖರ್ಚು ಆಗಿರುವುದು 288ಲಕ್ಷದ 80ಸಾವಿರ ರೂಪಾಯಿಗಳು. ಈಗಾಗಲೇ ಪ್ರಾಜೆಕ್ಟ್‌ನಲ್ಲಿ ಇದ್ದಂಥ ಹಣವೇ ಖರ್ಚಾಗದೇ ಇದ್ದಾಗ, ಆದ್ಯತೆ ನೀಡುವುದನ್ನು ರಾಜ್ಯಪಾಲರ ಭಾಷಣದಲ್ಲಿ ಹೇಳಿಸುವುದಾದರೂ ಏನು ಎಂದು ನಾನು ಕೇಳಬಯಸುತ್ತೇನೆ. ಆಯವ್ಯಯ ಪಟ್ಟಿಯಲ್ಲಿನ ಹಣವನ್ನು ಖರ್ಚುಮಾಡದೇ ಇರುವಾಗ, ಇವೊತ್ತಿನ ದಿವಸ ಯಾವ ಪ್ರಕಾರ ನೀರಾವರಿ ಯೋಜನೆಗಳು ಸಕ್ಸೆಸ್ ಆಗುತ್ತವೆ ಎನ್ನುವುದನ್ನು ತಾವೇ ವಿಚಾರ ಮಾಡಿ. ಇದೂ ಅಲ್ಲದೆ, ಹಿಂದೆ ಶ್ರೀಮಾನ್ ಜೆ. ಪುಟ್ಟಸ್ವಾಮಿಗೌಡರು, ಲೋಕೋಪಯೋಗಿ ಮಂತ್ರಿಗಳಾಗಿದ್ದಾಗ ಲಿಫ್ಟ್ ಇರಿಗೇಷನ್ ಕಾರ್ಪೋರೇಷನ್ ಸಲುವಾಗಿ ಒಂದು ಕೋಟಿ ರೂಪಾಯಿ ಹಣವನ್ನು ಇದೇ ವರ್ಷ ಒದಗಿಸಲಾಗುವುದು ಎಂದು ತಿಳಿಸಿದ್ದರು. ಆದರೆ ಇವೊತ್ತಿನವರೆಗೆ ಒಂದು ಪೈಸೆ ಸಹಿತ ಲಿಫ್ಟ್ ಇರಿಗೇಷನ್ ಕಾರ್ಪೋರೇಷನ್‌ಗೆ ಒದಗಿಸಿಲ್ಲ ಎಂದು ವಿಷಾದದಿಂದ ಹೇಳಬೇಕಾಗಿದೆ. ಯಾವುದೇ ಯೋಜನೆಗಳನ್ನು ಹಾಕಿಕೊಂಡಾಗ, ಆ ಯೋಜನೆಗಳನ್ನು ಮುಗಿಸಿದೆ ಮತ್ತೆ ಹೊಸದಾದ ಕೆಲವೊಂದು ಯೋಜನೆಗಳನ್ನು ಕೈಗೊಳ್ಳುತ್ತೇವೆಂದು ರಾಜ್ಯಪಾಲರ ಬಾಯಿಂದ ಹೇಳಿಸುವಂಥ ಜರೂರು ಏನಿತ್ತು ಎಂದು ಕೇಳುತ್ತೇನೆ. ಇವೊತ್ತಿನವರೆಗೂ ಮಲಪ್ರಭ, ಘಟಪ್ರಭ, ಹಿಪ್ಪರಗಿ, ಕೃಷ್ಣ ಮುಂತಾದ ಯಾವ ಯೋಜನೆಗಳನ್ನೂ ಕೈಗೊಂಡಿರುವುದಿಲ್ಲ. ಈಗಾಗಲೇ ನಮ್ಮ ದೇಶಪಾಂಡೆಯವರು ಹೇಳಿದ್ದಾರೆ. ಈಗ ಹೊಲ, ಮನೆಗಳನ್ನು ಏನು ಕಳೆದುಕೊಂಡಿದ್ದಾರೆ ಅವರ ಸಲುವಾಗಿ ಇದುವರೆಗೂ ರೀಹೆಬಿಲಿಟೇಟ್ ಮಾಡಲಿಕ್ಕೆ ಆಗಿಲ್ಲ ಎಂದು ಹೇಳಿದ್ದಾರೆ. ನಿಜವಾಗಿ ಹೇಳಬೇಕೆಂದರೆ, ನಮ್ಮ ಬೈಲಹೊಂದಲ ತಾಲ್ಲೂಕಿನಲ್ಲಿ ಬರತಕ್ಕ ಘಟಪ್ರಭ, ಮಲಪ್ರಭ ಯೋಜನೆಗಳ ರೀಹ್ಯಾಬಿಲಿಟೇಟ್ ಏರಿಯಾದಲ್ಲಿ ಯಾವ ಒಂದು ಯೋಜನೆಯನ್ನು ಹಾಕಿಕೊಂಡಿರುವುದಿಲ್ಲ. ಇಷ್ಟೇ ಅಲ್ಲ, ಅಲ್ಲಿ ಕುಡಿಯುವ ನೀರಿನ ಯೋಜನೆಯೂ ಸಹ ಇಲ್ಲ ಎಂದು ಹೇಳಬಹುದು. ಇಂತಹ ಯೋಜನೆಗಳು ಇಲ್ಲದೇ ಇರುವಾಗ, ಈ ಎಲ್ಲಾ ಯೋಜನೆಗಳಿಗೆ ಹೆಚ್ಚಿನ ಆದ್ಯತೆ ಕೊಡುತ್ತೇವೆಂದು ಹೇಳಿರುವ ಬಗ್ಗೆ ಕೇಳಬೇಕಾಗಿದೆ. ಇನ್ನು ಮತ್ತೊಂದು ವಿಚಾರ ಹೇಳಬೇಕೆಂದರೆ, ಹಿಂದೆ ಶ್ರೀಮಾನ್ ಪಾಟೀಲ್ ಪುಟ್ಟಪ್ಪನವರು ಇದ್ದಾಗ ಕನ್ನಡ ಕಾವಲು ಸಮಿತಿ ಬಹಳ ಒಳ್ಳೆಯ ರೀತಿಯಿಂದ ಕೆಲಸ ಮಾಡುತ್ತಿತ್ತು. ಆದರೆ ಇವೊತ್ತಿನ ದಿವಸ ಆ ಕಾವಲು ಸಮಿತಿಯನ್ನು ರದ್ದುಪಡಿಸಿದನಂತರ ಕನ್ನಡದ ಬಗ್ಗೆ ಈ ಸರ್ಕಾರದಲ್ಲಿ ಯಾವುದೇ ಒಂದು ಉತ್ಸಾಹವನ್ನು ತೋರುತ್ತಾ ಇಲ್ಲವೆಂದು ನಾನು ಧೈರ್ಯವಾಗಿ ಹೇಳುತ್ತೇನೆ. ಪ್ರತಿಯೊಬ್ಬ ಮಂತ್ರಿಯೂ, ಪ್ರತಿಯೊಬ್ಬ ಸೆಕ್ರಟರಿಯವರೂ ಸಹ ಮತ್ತೆ ಇಂಗ್ಲಿಷ್ನಲ್ಲಿ ಬರೆಯಲಿಕ್ಕೆ ಶುರುಮಾಡಿದ್ದಾರೆ.

ಆ ಕಾಲಕ್ಕೆ ಇವರಲ್ಲಿ ಸ್ವಲ್ಪ ಅಂಜಿಕೆ ಇತ್ತು, ಇಂಗ್ಲಿಷ್ ಟೈಪ್‌ರೈಟರನ್ನು ತೆಗೆದುಕೊಂಡುಹೋಗಿ ಕನ್ನಡ ಟೈಪ್‌ರೈಟರನ್ನು ಕೊಡಿಸುತಿದರು. ಅವರಿಗೆ ಅದಿಕಾರವಿಲದಿದರೂ

ಸಹ ಅಧಿಕಾರಿಗಳನ್ನು ಹೆದರಿಸತಕ್ಕ ಕೆಲಸವನ್ನು ಮಾಡುತ್ತಿದ್ದರು. ಆದರೆ ಈಗ ಪ್ರತಿಯೊಬ್ಬರೂ ಮತ್ತೆ ಇಂಗ್ಲಿಷ್‌ನಲ್ಲೇ ಪತ್ರಗಳನ್ನು ಬರೆಯುತ್ತಿದ್ದಾರೆ. ಹೀಗಿರುವಾಗ ನಾವು ಮೈಸೂರಿನಲ್ಲಿ ಒಂದು ಸಮ್ಮೇಳನವನ್ನು ಮಾಡಿ ಸಾಹಿತ್ಯದ ಬಗ್ಗೆ ಹೆಚ್ಚಿನ ಪ್ರೋತ್ಸಾಹವನ್ನು ಕೊಡುತ್ತೇವೆಂದು ಹೇಳಿದ್ದಾದರೂ ಏತಕ್ಕೆ ಎಂದು ಕೇಳಬಯಸುತ್ತೇನೆ.

ಇದೇ ಪ್ರಕಾರ ಹುಬ್ಬಳ್ಳಿ, ಧಾರವಾಡದಲ್ಲಿ ಹೈಕೋರ್ಟ್‌ನ ಒಂದು ಬೆಂಚನ್ನು ಪ್ರಾರಂಭ ಮಾಡುವ ಬಗ್ಗೆ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಏನಾದರೂ ಇರುತ್ತದೆಂದು ನಾವು ತಿಳಿದಿದ್ದೆವು. ಅದು ಏನೂ ಇಲ್ಲ. ಇಲ್ಲಿ ಒಂದು ಸಂತೋಷದ ಸಂಗತಿ ಎಂದರೆ, ಕೇಂದ್ರ ಸರ್ಕಾರದವರು ಹುಬ್ಬಳ್ಳಿ-ಧಾರವಾಡದಲ್ಲಿ ಹೈಕೋರ್ಟ್ ಬೆಂಚನ್ನು ಸ್ಥಾಪಿಸಲು ತಮ್ಮ ಒಪ್ಪಿಗೆಯನ್ನು ನೀಡಿದ್ದಾರೆಂದು ತಿಳಿಯಪಡಿಸುತ್ತೇನೆ. ಈಗಾಗಲೇ ಕೇಂದ್ರ ಸರ್ಕಾರದವರು ಒಪ್ಪಿರುವುದರಿಂದ ಹುಬ್ಬಳ್ಳಿ-ಧಾರವಾಡದಲ್ಲಿ ಒಂದು ಹೈಕೋರ್ಟ್ ಬೆಂಚನ್ನು ಸ್ಥಾಪಿಸಬೇಕು. ಇದರಿಂದಾಗಿ ಉತ್ತರ ಕರ್ನಾಟಕದ ಭಾಗದಲ್ಲಿರತಕ್ಕ ಎಲ್ಲ ಜನರಿಗೂ ಅನುಕೂಲವಾಗುತ್ತದೆಂದು ಹೇಳಬಯಸುತ್ತೇನೆ. ಇನ್ನೊಂದು ವಿಚಾರ ಎನೆಂದರೆ, ಮಾನ್ಯ ಗುಂಡೂರಾಯರ ಕಾಲದಲ್ಲಿ ಕ್ಯಾಬಿನೆಟ್ ಮೀಟಿಂಗ್‌ಗಳನ್ನು ಪ್ರತಿಯೊಂದು ಡಿವಿಜನಲ್ ಹೆಡ್‌ಕ್ವಾರ್ಟರ್‌ನಲ್ಲಿ ಆಗುತ್ತಿತ್ತು. ಇದರಿಂದ ಆ ಡಿವಿಜನ್‌ನಲ್ಲಿ ಇರತಕ್ಕಂಥ ಪ್ರಾಬ್ಲಂಗಳನ್ನು ತಿಳಿದುಕೊಳ್ಳಲಿಕ್ಕೆ ಅನುಕೂಲವಾಗುತ್ತಿತ್ತು. ಆ ಸಂದರ್ಭದಲ್ಲಿ ಶ್ರೀಮಾನ್ ಗುಂಡೂರಾಯರು ಸ್ಪಾಟ್ ಡಿಸಿಷನ್ ತೆಗೆದುಕೊಳ್ಳುತ್ತಿದ್ದರು. ಆದರೆ ಈ ಸರ್ಕಾರ ಬಂದಮೇಲೆ ಕ್ಯಾಬಿನೆಟ್ ಮೀಟಿಂಗ್‌ಗಳನ್ನು ಕೇವಲ ಬೆಂಗಳೂರಿನಲ್ಲಿ ಮಾತ್ರವೇ ಮಾಡುತ್ತಿದ್ದಾರೆ. ಒಟ್ಟಿನಲ್ಲಿ ಪ್ರತಿಯೊಂದೂ ಕೂಡ ಬೆಂಗಳೂರು, ಮೈಸೂರಿಗೆ ಮಾತ್ರ ಸೀಮಿತವಾಗಿರುತ್ತವೆ. ಆದ್ದರಿಂದ ಕ್ಯಾಬಿನೆಟ್ ಮೀಟಿಂಗ್‌ಗಳನ್ನು ಪ್ರತಿಯೊಂದು ಡಿವಿಜನಲ್ ಹೆಡ್‌ಕ್ವಾರ್ಟರ್‌ನಲ್ಲೂ ಮಾಡಬೇಕೆಂದು ನಾನು ಸಲಹೆ ಕೊಡುತ್ತಿದ್ದೇನೆ.

ಇನ್ನು ಕನ್ನಡ ಸಂಘಗಳಿಗೆ ಯಾವುದೇ ರೀತಿಯ ಪ್ರೋತ್ಸಾಹವನ್ನೂ ಕೊಡುತ್ತಿಲ್ಲ. ಇವತ್ತು ನಾವು ಹೇಳುವುದಾದರೆ, ಬೆಳಗಾಂನಲ್ಲಿ ಒಂದು ಕನ್ನಡ ಸಂಘದ ಭವನವನ್ನು ಕಟ್ಟುವ ಸಲುವಾಗಿ ಹಿಂದಿನ ಸರ್ಕಾರದವರು 4 ಲಕ್ಷ ರೂಪಾಯಿಗಳನ್ನು ಆಯವ್ಯಯ ಪಟ್ಟಿಯಲ್ಲಿ ಇಟ್ಟಿದ್ದರು. ಆರೀತಿ ಇಟ್ಟಿದ್ದರೂ ಕೂಡ ಇವತ್ತಿನವರೆಗೂ ಆ ಕೆಲಸಕ್ಕೆ ಯಾವುದೇ ಅಡ್ಮಿನಿಸ್ಟ್ರೇಟಿವ್ ಅಪ್ರೂವಲ್‌ನ್ನು ಕೊಟ್ಟಿಲ್ಲ. ಅಂದಮೇಲೆ ಈ ಸರ್ಕಾರದವರು ಕನ್ನಡ ಸಂಘದ ಭವನವನ್ನು ಕಟ್ಟುವ ಸಲುವಾಗಿ ಎಷ್ಟು ಪ್ರೋತ್ಸಾಹವನ್ನು ಕೊಡುತ್ತಿದ್ದಾರೆಂಬುದು ಇದರಿಂದಲೇ ತಿಳಿದುಬರುತ್ತದೆ. ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಕನ್ನಡ ಸಂಸ್ಕೃತಿಗೆ ಹೆಚ್ಚಿಗೆ ಪ್ರೋತ್ಸಾಹವನ್ನು ಕೊಡುತ್ತೇವೆಂದು ಹೇಳಿದ್ದಾರೆ. ಆದರೆ ಇದರಲ್ಲಿ ಯಾವುದೇ ಪ್ರೊವಿಷನ್ ಕೂಡ ಆಗಿಲ್ಲ ಎಂದು ನಾನು ಹೇಳಬಯಸುತ್ತೇನೆ.

ಇನ್ನು ಸುಪ್ರೀಂ ಕೋರ್ಟ್ ಬೆಂಚನ್ನು ದಕ್ಷಿಣ ಭಾರತದಲ್ಲಿ ಸ್ಥಾಪನೆ ಮಾಡಬೇಕೆನ್ನುವುದು ಬಹಳ ದಿವಸದಿಂದ ಕೇಂದ್ರ ಸರ್ಕಾರದಲ್ಲಿ ಇಲ್ಲಿನ ಜನರ ಬೇಡಿಕೆಯಾಗಿದೆ. ಇಂಥ ಒಳ್ಳೆಯ ಕಾರ್ಯಕ್ರಮದ ಬಗ್ಗೆ ಹೊಸ ಸರ್ಕಾರದವರು ಪ್ರಯತ್ನ ಮಾಡುತ್ತಾರೆ ಮತ್ತು ಇದರ ಬಗ್ಗೆ ಮಾನ್ಯ ರಾಜ್ಯಪಾಲರ ಕಡೆಯಿಂದ ಹೇಳಿಸಬಹುದೆಂದು ನಾನು ತಿಳಿದಿದ್ದೆ. ಆದರೆ ದಕ್ಷಿಣ ಭಾರತದಲ್ಲಿ ಬರತಕ್ಕ ಸುಪ್ರೀಂ ಕೋರ್ಟ್ ಬೆಂಚನ್ನು ಪಡೆಯಲಿಕ್ಕೆ ಇವರು ಪ್ರಯತ್ನ ಮಾಡುತ್ತಿಲ್ಲ ಎಂದು ಬಹಳ ವಿಷಾದದಿಂದ ಹೇಳುತ್ತಿದ್ದೇನೆ. ಈಗಲಾದರೂ ಸರ್ಕಾರದವರು ಈ ಸುಪ್ರೀಂ ಕೋರ್ಟ್ ಬೆಂಚನ್ನು ಪಡೆಯುವ ಸಲುವಾಗಿ ಉತ್ಸುಕತೆಯಿಂದ ಕೆಲಸಮಾಡಬೇಕೆಂದು ಹೇಳಲಿಕ್ಕೆ ಇಚ್ಛಿಪಡುತ್ತೇನೆ.

ಇನ್ನು ಇಂಡಸ್ಟ್ರೀಸ್ ಬಗ್ಗೆ ಹೆಚ್ಚಿನ ಪ್ರೋತ್ಸಾಹ ಕೊಡುತ್ತೇವೆಂದು ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದಾರೆ. ಆದರೆ ತುಮಕೂರು, ಬೆಂಗಳೂರು, ಮೈಸೂರುಗಳನ್ನು ಬಿಟ್ಟರೆ ಬೇರೆಕಡೆ ಎಲ್ಲೂ ದೊಡ್ಡದೊಡ್ಡ ಇಂಡಸ್ಟ್ರೀಸ್ ಇಲ್ಲ. ಇದರ ಸಲುವಾಗಿ ಹೆಚ್ಚಿನ ಸಬ್ಸಿಡಿಯನ್ನು ಹಿಂದುಳಿದ ಜಿಲ್ಲೆಗಳಿಗೆ ಕೊಡಬೇಕು.

ಇವತ್ತು ಯಾರು ಇಂಡಸ್ಟ್ರೀಸ್‌ನ್ನು ಸ್ಥಾಪನೆ ಮಾಡಿದ್ದಾರೆ, ಆ ಬಿಲ್ಡಿಂಗ್ ಕಂಪ್ಲೀಟ್ ಆಗಿದ್ದರೂ ಕೂಡ ಇವತ್ತಿನವರೆಗೂ ಅವರಿಗೆ ಸಬ್ಸಿಡಿ ರಿಲೀಸ್ ಆಗಿಲ್ಲ. ಈ ಸಬ್ಸಿಡಿ ರಿಲೀಸ್ ಆಗದಿದ್ದರೆ ಇಂಡಸ್ಟ್ರೀಸ್ ಯಾವರೀತಿ ಅಭಿವೃದ್ಧಿ ಹೋಗುವುದಕ್ಕೆ ಸಾಧ್ಯ ಎಂಬುದನ್ನು ತಾವು ತಿಳಿದುಕೊಳ್ಳಬೇಕು. ಯಾವುದೇ ಒಂದು ಬಾರ್ಡರ್ ಏರಿಯಾದಲ್ಲಿ ಅಂದರೆ ಬೆಳಗಾಂನಲ್ಲಿ ಅಥವಾ ಬೆಳಗಾಂ ಜಿಲ್ಲೆಯಲ್ಲಿ ಪೂರ್ಣವಾಗಿ ಮುಗಿದಿರತಕ್ಕ ಇಂಡಸ್ಟ್ರೀಸ್‌ಗೆ ಸಬ್ಸಿಡಿಯನ್ನು ಕೂಡಲೇ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ಹೌಸಿಂಗ್ ಬೋರ್ಡ್ ವಿಚಾರದಲ್ಲಿ ಹೇಳುವುದಾದರೆ, ಇದು ಕೇವಲ ಮೈಸೂರು, ಬೆಂಗಳೂರು, ಹುಬ್ಬಳ್ಳಿ ಈ 3-4 ಜಿಲ್ಲೆಗಳನ್ನು ಬಿಟ್ಟು ಬೇರೆಕಡೆ ಬರುತ್ತಿಲ್ಲ. ಆದ್ದರಿಂದ ತಾಲೂಕು ಮಟ್ಟದಲ್ಲಿ ಮತ್ತು ಜಿಲ್ಲಾ ಮಟ್ಟದಲ್ಲಿ ಈ ಹೌಸಿಂಗ್ ಬೋರ್ಡ್ ಬರುವಂತೆ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಮಾನ್ಯ ರಾಜ್ಯಪಾಲರು ಮನೆ ಇಲ್ಲದವರಿಗೆ ಮನೆ, ನಿವೇಶನ ಇಲ್ಲದವರಿಗೆ ನಿವೇಶನ ಕೊಡುತ್ತೇವೆಂದು ಹೇಳಿದ್ದಾರೆ. ಆದರೆ ಅದು ಯಾವುದೂ ಇವತ್ತು ಆಗುತ್ತಿಲ್ಲ. ಇನ್ನೊಂದು ವಿಚಾರವನ್ನು ಹೇಳುವುದಾದರೆ, ಮಂಡಲ ಪಂಚಾಯಿತಿ ಮತ್ತು ಜಿಲ್ಲಾ ಪರಿಷತ್ತು ವತಿಯಿಂದ ಲ್ಯಾಂಡ್ ಅಕ್ವಿಸಿಷನ್ ಮಾಡುತ್ತಾರೆ. ಹೈಕೋರ್ಟ್‌ನಲ್ಲಿ ,ಡಿಸ್ಟ್ರಿಕ್ಟ್ ಕೋರ್ಟ್‌ನಲ್ಲಿ, ಸಿವಿಲ್ ಕೋರ್ಟ್‌ನಲ್ಲಿ ಕಾಂಪನ್‌ಸೇಷನ್ ಹೆಚ್ಚಿಗೆ ಕೊಡಬೇಕೆಂದು ತೀರ್ಮಾನ ಆಗುತ್ತದೆ. ಆದರೆ ಅದನ್ನು ಕೊಡಲಿಕ್ಕೆ ಜಿಲ್ಲಾಪರಿಷತ್ತಿನಲ್ಲಾಗಲಿ, ಮಂಡಲ ಪಂಚಾಯಿತಿಯಲ್ಲಾಗಲಿ ಪ್ರಾವಿಷನ್ ಇಲ್ಲ. ಸರ್ಕಾರದವರನ್ನು ಕೇಳಿದರೆ ನೀವು ಜಿಲ್ಲಾಪರಿಷತ್ತಿಗೆ ಅಥವಾ ಮಂಡಲ ಪಂಚಾಯಿತಿಗೆ ಹೋಗಿ ಎಂದು ಹೇಳುತ್ತಾರೆ. ಇವತ್ತು ಜಿಲ್ಲಾಪರಿಷತ್ತಿನವರು, ಮಂಡಲ ಪಂಚಾಯಿತಿಯವರು ಸೈಟ್ಸ್‌ನ್ನು ಡಿಸ್ಟ್ರಿಬ್ಯೂಟ್ ಮಾಡುತ್ತಾರೆ. ಆದರೆ ಅವನ್ನು ಸರ್ಕಾರದವರು ತೆಗದುಕೊಂಡಿದ್ದಾರೆಂದು ಹೇಳುತ್ತಾರೆ. ಇವತ್ತು ಪ್ರತಿಯೊಬ್ಬ ಅಸಿಸ್ಟೆಂಟ್ ಕಮೀಷನರ್‌ರವರ ಕುರ್ಚಿಗಳನ್ನೂ ಜಪ್ತಿ ಮಾಡತಕ್ಕ ಪ್ರಸಂಗ ಪ್ರಾರಂಭವಾಗಿದೆ. ಆದ್ದರಿಂದ ಏನು ಸೈಟ್ಸ್ ಡಿಸ್ಟ್ರಿಬ್ಯೂಷನ್ ಮಾಡುತ್ತಾರೆ ಅದರ ಬಗ್ಗೆ ಬಜೆಟ್‌ನಲ್ಲಿ ಪ್ರಾವಿಷನ್ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ಪಂಚಸೂತ್ರದ ಬಗ್ಗೆ ಹೇಳುವುದಾದರೆ, ಇದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳಿಂದ ಅಪ್ಪಣೆಯಾಗಬೇಕು. ಏಕೆಂದರೆ, ಇವತ್ತಿನವರೆಗೂ ಮಾನ್ಯ ಮುಖ್ಯಮಂತ್ರಿಗಳು ವಿಧಾನಸೌಧದಲ್ಲಿ ಯಾವ ಎಂ.ಎಲ್.ಎ.ಗಳನ್ನಾದರೂ ಕಂಡಿದ್ದಾರೆಯೆ ಎಂಬುದನ್ನು ತಾವು ಕೇಳಬೇಕು. ಹಿಂದೆ ಶ್ರೀಮಾನ್ ವೀರೇಂದ್ರಪಾಟೀಲರು, ಮಾನ್ಯ ರಾಮಕೃಷ್ಣ ಹೆಗಡೆಯವರು ಮುಖ್ಯ ಮಂತ್ರಿಗಳಾಗಿದ್ದ ಕಾಲದಲ್ಲಿ ಶಾಸಕರಿಗೆ 4ರಿಂದ 5 ಗಂಟೆವರೆಗೆ, 11ಗಂಟೆಯಿಂದ 12ಗಂಟೆಯವರೆಗೆ ಭೇಟಿಗೆ ಅವಕಾಶವನ್ನು ಕೊಡುತ್ತಿದ್ದರು. ಆ ಒಂದು ಕಾರ್ಯಕ್ರಮವನ್ನು ಅವರು ಹಾಕಿಕೊಂಡಿದ್ದರು. ಆದರೆ ಇವತ್ತು ಈ ಮುಖ್ಯ ಮಂತ್ರಿಗಳು ಶಾಸಕರನ್ನೇ ಭೇಟಿಯಾಗುವುದಿಲ್ಲ. ಅದಲ್ಲದೇ ಅಧಿಕಾರಿಗಳಿಗೆ ನೀವು 4 ಗಂಟೆಯಿಂದ 5 ಗಂಟೆವರೆಗೆ ನಮಗೆ ಭೇಟಿಗೆ ಅವಕಾಶ ಕೊಡಿ, 3 ಗಂಟೆಯಿಂದ 5ಗಂಟೆಯವರೆಗೆ ಭೇಟಿಗೆ ಅವಕಾಶ ಕೊಡಿ ಎಂದು ಕೇಳುವುದಕ್ಕೆ ಸಾಧ್ಯವೆ?

4.45 ಪಿ.ಎಂ.

ಶ್ರೀ ಮಲ್ಲನ್ನಗೌಡ ಎಸ್. ಪಾಟೀಲ್ : ಮಾನ್ಯ ಕೌಜಲಗಿಯವರೇ ತಾವು ಯಾವಾಗ ಬೇಟಿಯಾಗಲಿಕ್ಕೆ ಹೋಗಿದ್ದಿರಿ.

ಶ್ರೀ ಎಸ್.ಹೆಚ್. ಕೌಜಲಗಿ : ನಾನು ವಾಸುದೇವ ಅವರೊಬ್ಬರನ್ನು ಭೇಟಿಯಾಗಲಿಕ್ಕೆ ಹೋಗುತ್ತೇನೆ. ಬೇರೆಯವರನ್ನೂ ಭೇಟಿ ಮಾಡಲಿಕ್ಕೆ ಹೋಗುವುದಿಲ್ಲ. ಇವತ್ತಿನದಿವಸ ಒಂದು ಲಕ್ಷ ಇಪ್ಪತ್ತಾರು ಸಾವಿರ ಫೈಲ್‌ಗಳು ಮಾನ್ಯ ಮುಖ್ಯಮಂತ್ರಿಗಳ ಆಫೀಸ್‌ನಲ್ಲಿ ಇದೆ. ನಾನು ಇವತ್ತಿನ ದಿವಸ ಹೇಳಿದ್ದು ಸುಳ್ಳು ಹೇಳಿಕೆಯಾದರೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುವಾಗ ತಮ್ಮ ಭಾಷಣದಲ್ಲಿ ಹೇಳಲಿ. ಅವರು

ಕೇಳಿದ್ದನ್ನು ನಾನು ಕೊಡುತ್ತೇನೆ. ಮೂರು-ಮೂರು, ನಾಲ್ಕು-ನಾಲ್ಕು ತಿಂಗಳ ತನಕ ಫೈಲ್ಸ್ ಇವೆ ಅಂದರೆ ತಾವು ಯಾವರೀತಿ ಆಡಳಿತದಲ್ಲಿ ಬಿಗಿ ತರುತ್ತೀರಿ ಎನ್ನುವುದನ್ನು ಹೇಳಬೇಕು. ತಮ್ಮ ಆಫೀಸಿನಲ್ಲಿರುವ ಫೈಲುಗಳನ್ನು ತಾವು ಮೊದಲು ವಿಲೇವಾರಿ ಮಾಡಬೇಕು, ಅನಂತರ ತಮ್ಮ ಸಬಾರ್ಡಿನೇಟ್ಸ್‌ಗೆ ಹೇಳಬೇಕು. ಇವತ್ತಿನದಿವಸ 1,26,000 ಫೈಲುಗಳನ್ನು ಇಟ್ಟುಕೊಂಡಿರುವುದು ಕಂಡುಬಂದಿದೆ. ಎಜುಕೇಷನ್ ಡಿಪಾರ್ಟ್‌ಮೆಂಟ್‌ನ 26 ಮಂದಿಯ ಪ್ರಮೋಷನ್ ಫೈಲು ಚೀಫ್ ಮಿನಿಸ್ಟರ್‌ರವರ ಆಫೀಸಿನಲ್ಲಿ 3-4 ತಿಂಗಳಿನಿಂದ ಪೆಂಡಿಂಗ್ ಇದೆ. ಏತಕ್ಕೆ ಈ ರೀತಿ ಫೈಲ್ ಪೆಂಡಿಂಗ್ ಇರಬೇಕು. ಇಂಥ ಒಂದೊಂದು ಫೈಲ್ ಅಲ್ಲಿದೆ ಡೆವಲಪ್‌ಮೆಂಟ್ಸ್ ಫೈಲ್ಸ್ ಸಹ ಅಲ್ಲಿ ಇರುವುದರಿಂದ ಎಲ್ಲ ಅಮೌಂಟ್ ಲ್ಯಾಪ್ಸ್ ಆಗುತ್ತಿದೆ. ಹೀಗೆ ಪ್ರತಿಯೊಂದು ಫೈಲ್ ಸಹ ಚೀಫ್ ಮಿನಿಸ್ಟರ್‌ರವರಿಗೆ ಹೋಗಬೇಕು. ಇವತ್ತಿನದಿವಸ ಯಾವುದಕ್ಕಾದರೂ ಹೆಸರಿಡಬೇಕೆಂದರೆ ಆ ಫೈಲ್ ಚೀಫ್ ಮಿನಿಸ್ಟರಿಗೆ ಹೋಗಬೇಕು. ಈ ಸರ್ಕಾರದವರು ಪ್ರತಿಯೊಂದು ಚೀಫ್ ಮಿನಿಸ್ಟರ್ ನೋಡಬೇಕೆಂದು ಕಾರ್ಯಕ್ರಮ ಹಾಕಿಕೊಂಡಿರುತ್ತಾರೆ. ನಾಮಿನೇಷನ್ ಮಾಡಬೇಕಾಗಿರಲಿ, ಅಡ್ವೋಕೇಟ್ ವಿಚಾರವಿರಲಿ. ಪ್ರತಿಯೊಂದು ಚೀಫ್ ಮಿನಿಸ್ಟರಿಗೆ ಹೋಗಿಬರಬೇಕೆಂದರೆ ಎಷ್ಟು ಟೈಮ್ ತೆಗೆದುಕೊಳ್ಳುತ್ತದೆ, ಅಷ್ಟರಲ್ಲಿ ಅದರ ಅವಧಿಯೇ ಮುಗಿದಿರುತ್ತದೆ. ಹೀಗಾಗಿ ಬಹಳ ಅನ್ಯಾಯವಾಗುತ್ತಿದೆ. ದಯವಿಟ್ಟು ಮುಖ್ಯಮಂತ್ರಿಗಳು ಪಂಚಸೂತ್ರವನ್ನು ಬೇರೆಯವರಲ್ಲಿ ಅಮಲಿನಲ್ಲಿ ತರುವುದಕ್ಕಿಂತ ಮೊದಲು ತಮ್ಮ ಆಫೀಸಿನಲ್ಲಿ ಅಮಲಿನಲ್ಲಿ ತಂದು ಬೇರೆಯವರಿಗೆ ಹೇಳುವ ಬಗ್ಗೆ ಗಮನಕೊಡಬೇಕೆಂದು ಹೇಳುತ್ತೇನೆ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಮಾನ್ಯ ಅಧ್ಯಕ್ಷರೇ, ಎಲ್ಲ ಫೈಲುಗಳು ಮಾನ್ಯ ಮುಖ್ಯಮಂತ್ರಿಗಳಿಗೆ ಹೋಗಬೇಕೆಂದರೆ ಇದು ಸಾಮೂಹಿಕ ಜವಾಬ್ದಾರಿಯ ಸರ್ಕಾರವೇ ಮಾನ್ಯ ಮುಖ್ಯಮಂತ್ರಿಗಳೊಬ್ಬರೇ ನಿರ್ವಹಿಸತಕ್ಕಂಥ ಸರ್ಕಾರವೇ ಎನ್ನುವ ಸಂಶಯ ಬರುತ್ತದೆ. ಆಯಾ ಮಂತ್ರಿಗಳು ತಮ್ಮ ತಮ್ಮ ಫೈಲುಗಳನ್ನು ವಿಲೇವಾರಿ ಮಾಡಬೇಕು. ಪ್ರತಿಯೊಂದು ಮುಖ್ಯಮಂತ್ರಿಗಳಿಗೆ ಹೋಗಬೇಕಾದರೆ ಇದು ಸಾಮೂಹಿಕ ಜವಾಬ್ದಾರಿ ಇಲ್ಲದಂಥ, ಜಂಟಿ ಜವಾಬ್ದಾರಿ ಇಲ್ಲದಂಥ ಸರ್ಕಾರವೆಂದು ಹೇಳಬೇಕಾಗಿದೆ.

ಶ್ರೀ ಎ.ಎಸ್. ನಾಡಗೌಡ : ಯಾವ ಫೈಲ್ ಸಿ.ಎಂ.ಅಪ್ರೂವಲ್‌ಗೆ ಹೋಗಬೇಕು ಎನ್ನುವುದನ್ನು ತಾವು ಹೇಳಬೇಕು. ಎಲ್ಲ ಫೈಲ್‌ಗಳು ಸಿ.ಎಂ.ಅಪ್ರೂವಲ್‌ಗೆ ಹೋಗಬೇಕೆಂದು ಹೇಳುತ್ತಿದ್ದೀರಿ, ಯಾವ ಇಲಾಖೆಯ ಯಾವ ಫೈಲ್ ಚೀಫ್ ಮಿನಿಸ್ಟರಿಗೆ ಹೋಗಿದೆ ಎನ್ನುವುದನ್ನು ತಾವು ಹೇಳಬೇಕು.

ಶ್ರೀ ಎಸ್.ಹೆಚ್. ಕೌಜಲಗಿ : ಇವತ್ತಿನದಿವಸ ಒಂದು ಲಕ್ಷ ಇಪ್ಪತ್ತಾರು ಸಾವಿರ ಫೈಲ್‌ಗಳು ಅವರ ಆಫೀಸ್‌ನಲ್ಲಿ ಪೆಂಡಿಂಗ್ ಇವೆ. ಅವನ್ನೆಲ್ಲ ತೆಗೆಸಬೇಕು. ಎಷ್ಟು ಫೈಲ್‌ಗಳು ಎಷ್ಟು ದಿವಸಗಳಿಂದ ಪೆಂಡಿಂಗ್ ಇವೆ ಎನ್ನುವುದನ್ನು ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಹೇಳುವಾಗ ಹೇಳಬೇಕೆಂದು ಕೇಳಿಕೊಳ್ಳುತ್ತೇನೆ.

ಮಾನ್ಯ ಸ್ನೇಹಿತರು ಈ ರಾಜ್ಯದಲ್ಲಿ ಎಜ್ಯುಕೇಷನ್ ಸಲುವಾಗಿ ಬಹಳವಾಗಿ ಹೇಳಿದರು. ಅದರಲ್ಲೂ ಧಾರವಾಡ ವಿಶ್ವವಿದ್ಯಾನಿಲಯದ ಬಗ್ಗೆ ಅಲ್ಲಿ ಕೊಡುವ ಸಲುವಾಗಿ ಯಾವುದೇ ಒಂದು ಕಾರ್ಯಕ್ರಮವನ್ನು ಕೈಗೊಂಡಿಲ್ಲ. ಧಾರವಾಡ ವಿಶ್ವವಿದ್ಯಾನಿಲಯದಲ್ಲಿ ಒಂದು ಅಕ್ವೇರಿಯಮ್‌ಕೂಡ ಇಲ್ಲ, ಒಂದು ಸ್ಟೇಡಿಯಮ್ ಸಹಿತ ಇಲ್ಲ, ಇಂಥ ಒಂದು ಪರಿಸ್ಥಿತಿ ಧಾರವಾಡದ ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿದೆ. ಅಲ್ಲದೆ ಧಾರವಾಡದಲ್ಲಿ ಕೃಷಿ ವಿಶ್ವವಿದ್ಯಾನಿಲಯ ಹೊಸದಾಗಿ ಸ್ಥಾಪನೆಯಾಗಿದ್ದರೂ ಸಹಿತ ಆ ಕೃಷಿ ವಿಶ್ವವಿಧ್ಯಾನಿಲಯಕ್ಕೆ ಹೆಚ್ಚಿನ ಸಹಾಯಧನವನ್ನು ಕೊಡುವ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ಎಲ್ಲೂ ಹೇಳಿಲ್ಲ. ಬೆಳಗಾಮ್‌ನಲ್ಲಿ ಟೆಕ್ನಿಕಲ್ ಎಜ್ಯುಕೇಷನ್ ಪ್ರಾರಂಭ ಮಾಡುತ್ತೇವೆಂದು ಮಾನ್ಯ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಗಳಾಗಿದ್ದಾಗ

ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಹೇಳಿಸಿದ್ದರು. ಅದನ್ನು ಈ ಸರ್ಕಾರದವರು ಅನುಸ್ಥಾನಕ್ಕೆ ತರುವಂಥ ಕೆಲಸಮಾಡಲಿಲ್ಲ.

ಶ್ರೀ ಮಲ್ಲಾರಿಗೌಡ ಎಸ್.ಪಾಟೀಲ್ : ಮಾನ್ಯ ಕೌಜಲಗಿಯವರು ಹಿಂದಿನ ಮುಖ್ಯ ಮಂತ್ರಿಗಳ ವಿಷಯ ಹೇಳಿದರು. ಮಾನ್ಯ ಮುಖ್ಯಮಂತ್ರಿಗಳು ಬೆಳಗಾಮ್‌ಗೆ ಬಂದಾಗ ಮೆಡಿಕಲ್ ಯೂನಿವರ್ಸಿಟಿಯನ್ನು ಮಾಡುತ್ತೇವೆಂದು ಹೇಳಿದರು. ಬೆಂಗಳೂರಿಗೆ ಬಂದಾಗ ಟೆಕ್ನಿಕಲ್ ಯೂನಿವರ್ಸಿಟಿ ಮಾಡುತ್ತೇವೆಂದು ಹೇಳಿದ್ದರು. ಈಗ ಯಾವುದನ್ನು ಮಾಡಿಸಿಕೊಳ್ಳುತ್ತೀರಿ?

ಶ್ರೀ ಎಸ್.ಹೆಚ್. ಕೌಜಲಗಿ : ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಬೆಳಗಾಂನಲ್ಲಿ ಟೆಕ್ನಿಕಲ್ ಯೂನಿವರ್ಸಿಟಿ ತೆಗೆಯುತ್ತೇವೆಂದು ಹೇಳಿದ್ದಾರೆ. ಅವರ ಭಾಷಣದಲ್ಲಿ ಯಾವುದು ಇದೆಯೋ ಅದನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಯಾವುದೇ ರಾಜ್ಯಪಾಲರ ಭಾಷಣ ಇರಲಿ, ಅವರ ಭಾಷಣದಲ್ಲಿ ಹೇಳಿದ ಮೇಲೆ ಅದನ್ನು ಕಾರ್ಯಗತ ಮಾಡುವುದು ಸರ್ಕಾರದ ಕರ್ತವ್ಯ. ಇವತ್ತು ಈ ಸರ್ಕಾರ ಇರಬಹುದು, ನಾಳೆ ಬೇರೆ ಸರ್ಕಾರ ಬರಬಹುದು. ಆದರೆ ಕೊಟ್ಟಂತಹ ಆಶ್ವಾಸನೆಯನ್ನು ಈಡೇರಿಸುವುದು ಸರ್ಕಾರದ ಕರ್ತವ್ಯವೆಂದು ಹೇಳುತ್ತಿದ್ದೇನೆ. ಕುಡಿಯುವ ನೀರಿನ ಬಗ್ಗೆ ಹೇಳುವುದಾದರೆ, ಇವತ್ತಿನ ದಿವಸ ಹೆಚ್ಚಾಗಿ ಕುಡಿಯುವ ನೀರಿನ ಸಲುವಾಗಿ ಕೇಳುತ್ತಿದ್ದೇವೆ. ಗ್ರಾಮಾಂತರ ಮತ್ತು ನಗರ ಪ್ರದೇಶಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಬಹಳವಾಗಿ ಇದೆ. ಇವತ್ತಿನ ದಿವಸ ಬೆಂಗಳೂರಿನಲ್ಲಾಗಲಿ, ಧಾರವಾಡದಲ್ಲಾಗಲಿ ಮಂತ್ರಿಗಳು ಎಲ್ಲಿ ಇರುತ್ತಾರೆ ಅಲ್ಲಿ ಬೋರ್‌ವೆಲ್‌ಗಳನ್ನು ಹಾಕಿಸುತ್ತಾರೆ. ಬೆಂಗಳೂರಿನಲ್ಲಿ ಮತ್ತು ಮೈಸೂರಿನಲ್ಲಿ 9 ಜನ ಮಂತ್ರಿಗಳು ಇದ್ದಾರೆ ಇವರಿಗೆ ಕುಡಿಯುವ ನೀರಿನ ತ್ರಾಸು ಗೊತ್ತಾಗುತ್ತದೆ. ಆದರೆ ತಾಲ್ಲೂಕು ಕೇಂದ್ರಗಳಲ್ಲಿರತಕ್ಕ ಕುಡಿಯುವ ಸಮಸ್ಯೆ ಇವರಿಗೆ ಹೇಗೆ ಗೊತ್ತಾಗಬೇಕು? ನಾನು ಜಾರ್ಜ್ ಅವರನ್ನು ಒಂದು ವರ್ಷದಿಂದ ಕೇಳುತ್ತಿದ್ದೇನೆ. ಬೆಳಗಾಂ ಜಿಲ್ಲೆಯ ಬೈಲ ಹೊಂಗಲದಲ್ಲಿ ಕುಡಿಯುವ ನೀರಿನ ಸಮಸ್ಯೆ ಬಹಳ ಇದೆ, 25 ಬೋರ್‌ವೆಲ್‌ಗಳನ್ನು ಹಾಕಿಸಿಕೊಡಿ ಎಂದು ಕೇಳಿದೆ. ಅವರು 15 ಬೋರ್‌ವೆಲ್‌ಗಳನ್ನು ಹಾಕಿಸಿಕೊಡುತ್ತೇವೆಂದು ಹೇಳಿ ಒಂದು ವರ್ಷವಾದರೂ ಇನ್ನೂ ಹಾಕಿಸಿಕೊಟ್ಟಿಲ್ಲ. ಹೀಗಾಗಿ ಯಾರು ಹೆದರಿಸಿ ಕೆಲಸಮಾಡಿಸಿಕೊಳ್ಳುತ್ತಾರೆ ಅವರ ಕೆಲಸಗಳು ಆಗುತ್ತವೆ. ಯಾರು ಒಳ್ಳೆಯ ರೀತಿಯಿಂದ ಸಮಾಧಾನದಿಂದ ಹೇಳುತ್ತಾರೆ ಅವರ ಕೆಲಸಗಳು ಆಗುವುದಿಲ್ಲ. ಆದ ಕಾರಣ ಪ್ರತಿಯೊಂದು ನಗರ ಪ್ರದೇಶದಲ್ಲಿ ಚೀಫ್ ಮಿನಿಸ್ಟರ್ ರಿಲೀಫ್ ಫಂಡ್‌ನಲ್ಲಾದರೂ, ಬರಗಾಲದ ರಿಲೀಫ್ ಫಂಡ್‌ನಲ್ಲಾದರೂ ಬೋರ್‌ವೆಲ್‌ಗಳನ್ನು ಹಾಕಿಸಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಎಲೆಕ್ಟ್ರಿಕ್ ಪಂಪ್‌ಸೆಟ್ ಬಗ್ಗೆ ಹೇಳುವುದಾದರೆ, 60 ಸಾವಿರ ಹೆಚ್ಚಿನ ಪಂಪ್‌ಸೆಟ್‌ಗಳನ್ನು ಈ ವರ್ಷ ಒದಗಿಸಲಾಗುವುದು ಎಂದು ರಾಜ್ಯಪಾಲರು ಹೇಳಿದ್ದಾರೆ. ಇವತ್ತಿನದಿವಸ ಹೆಚ್ಚಿನ ಪಂಪುಸೆಟ್ಟುಗಳನ್ನು ಒದಗಿಸುವುದು ಬೇಡ, ಇರುವ ಟಾರ್ಗೆಟ್ ಮುಟ್ಟಿದರೆ ಸಾಕು. ಬೈಲಹೊಂಗಲದಲ್ಲಿ ಆ ವರ್ಷ 500 ಪಂಪುಸೆಟ್ಟುಗಳನ್ನು ಹಾಕುವ ಟಾರ್ಗೆಟ್ ಇದೆ. ಮಾರ್ಚ್ 7ರಂದು ನಾನು ಕೇಳಿದಾಗ 311 ಆಗಿದೆ ಎಂದು ಹೇಳಿದರು. ಹೀಗೆ ಟಾರ್ಗೆಟ್ ಮುಗಿಸಲಿಕ್ಕೆ ಆಗದೆ ಇರುವಾಗ ಇನ್ನು 60 ಸಾವಿರ ಪಂಪುಸೆಟ್ಟುಗಳನ್ನು ಯಾವಾಗ ಹಾಕುತ್ತಾರೆ?

1990ನೇ ಸಾಲಿನಲ್ಲಿ ಬೆಳಗಾಂ ಜಿಲ್ಲೆಯಲ್ಲಿ ಯಾವ ಯಾವ ತಾಲ್ಲೂಕಿಗೆ ಎಷ್ಟೆಷ್ಟು ಟಾರ್ಗೆಟ್ ಇದೆ ಆ ಟಾರ್ಗೆಟ್ ಪ್ರಕಾರ ಬೋರ್ ಹಾಕಲಾಗಿದೆಯೆ? ಈ ಬಗ್ಗೆ ಪ್ರಶ್ನೆ ಕೇಳಿದರೆ ಅನ್‌ಸ್ಟಾರ್ಡ್ ಮಾಡುತ್ತಾರೆ, ಅದಕ್ಕೂ ಉತ್ತರ ಕೊಡುವುದಿಲ್ಲ. ನಾನು ಈ ಬಗ್ಗೆ ಪ್ರಶ್ನೆ ಹಾಕಿದ್ದೆ, ಇವತ್ತಿನವರೆಗೆ ಉತ್ತರ ಕೊಟ್ಟಿಲ್ಲ. ಪೇಪರ್ ಪಬ್ಲಿಸಿಟಿಗಾಗಿ

60 ಸಾವಿರ ಪಂಪುಸೆಟ್ಟುಗಳನ್ನು ಒದಗಿಸುತ್ತೇವೆಂದು ಎಂದು ಹೇಳುವುದು. ಆದರೆ ಒಂದನ್ನೂ ಒದಗಿಸುವ ಹಾಗೆ ಇಲ್ಲ. ಇನ್ನು ಕೆ.ಎಸ್.ಆರ್.ಟಿ.ಸಿ. ಬಗ್ಗೆ ಹೇಳುವುದಾದರೆ, ನಾವು ಯಾವಾಗ ಇದ್ದರೂ ರೊಕ್ಕ ಕೊಟ್ಟು ಬಸ್ಸು ಹತ್ತಬೇಕು. ನಾವು ಹೊಸ ಬಸ್ಸು ನೋಡಬೇಕೆಂದರೆ ಬೆಂಗಳೂರು, ಮೈಸೂರಿಗೆ ಹೋಗಿ ನೋಡಬೇಕು. ನಾವು ರೊಕ್ಕ ಕೊಟ್ಟು ಟಿಕೇಟ್ ತೆಗೆದುಕೊಂಡರೂ ಹೊಸ ಬಸ್ಸಿನಲ್ಲಿ ಕುಳಿತುಕೊಳ್ಳುವುದಕ್ಕೆ ಆಗುವುದಿಲ್ಲ, ಇಲ್ಲಿ ಉಳಿದಿರತಕ್ಕ ಬಸ್‌ಗಳು ನಮ್ಮ ಕಡೆಬರುತ್ತವೆ. ಆ ಬಸ್ಸಿನಲ್ಲಿ ಹತ್ತಬೇಕೆಂದರೆ ಟಕಟಕ ಹತ್ತಬೇಕು. ಅಕಸ್ಮಾತ್ ಹೊಸ ಬಸ್‌ನಲ್ಲಿ ಕುಳಿತರೆ, ಅದರಲ್ಲಿ ಕುಳಿತುಪ್ರಯಾಣ ಮಾಡುವುದಕ್ಕೆ ಆಗುವುದಿಲ್ಲ, ಏಕೆಂದರೆ, ನಮ್ಮ ಮಂದಿಗೆ ಹೊಸ, ಬಸ್ಸಿನಲ್ಲಿ ಕುಳಿತು ರೂಢಿಯೇ ಇರುವುದಿಲ್ಲ ಇಲ್ಲದಿದ್ದರೆ ಮೇಲೆ ಹತ್ತಿ ಕೂರಬೇಕಾಗುತ್ತದೆ. ಒಳಗೆ ಕೂರುವುದಕ್ಕೆ ಆಗುವುದಿಲ್ಲ. ಇವತ್ತಿನ ದಿವಸ ಬೆಳಗಾಂ, ಹುಬ್ಬಳ್ಳಿಯಲ್ಲಿ ಒಂದೊಂದು ಕೋಟಿ ರೂಪಾಯಿ ನೆಟ್ ಪ್ರಾಫಿಟ್ ಕೊಡುತ್ತೇವೆ. ಆದರೆ ಇಲ್ಲಿ ಲಾಸ್ ತೋರಿಸುತ್ತಿದ್ದಾರೆ. ಆದರೂ ಇಲ್ಲಿ ಹೊಸ ಬಸ್ಸು, ಅಲ್ಲಿ ಹಳೆಯ ಬಸ್ಸು. ಪ್ರತಿಯೊಂದು ಜಿಲ್ಲೆಗೂ., ಪ್ರತಿಯೊಂದು ಏರಿಯಾಕ್ಕೂ ಡೆವಲಪ್‌ಮೆಂಟಲ್ ಆಕ್ಟಿವಿಟೀಸ್ ಹಾಕಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಮಾನ್ಯ ಮುಖ್ಯ ಮಂತ್ರಿಗಳಿಗೆ ಹೇಳುತ್ತೇನೆ, ಉತ್ತರ ಕರ್ನಾಟಕಕ್ಕೆ ಬಹಳ ಅನ್ಯಾಯವಾಗಿದೆ, ಈ ಅನ್ಯಾಯ ಮುಂದುವರಿದರೆ ಉತ್ತರ ಕರ್ನಾಟಕವನ್ನು ಬೇರೆ ರಾಜ್ಯವನ್ನು ಮಾಡುವಂತೆ ಕೇಳುವ ಪ್ರಶ್ನೆ ಬರುತ್ತದೆ. ಆದುದರಿಂದ ಮುಖ್ಯಮಂತ್ರಿಗಳು ಇದಕ್ಕೆ ಅವಕಾಶ ಕೊಡಬಾರದೆಂದು ಹೇಳಿ, ಮಾನ್ಯ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

ಡಾ|| ಜಿ. ಪರಮೇಶ್ವರ್ (ಮಧುಗಿರಿ) : ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ರಾಜ್ಯಪಾಲರ ಭಾಷಣಕ್ಕೆ ಅನುಮೋದನೆಯನ್ನು ಸಲ್ಲಿಸುತ್ತಾ, ಕೆಲವು ಸಲಹೆಗಳನ್ನು ಈ ಸಂದರ್ಭದಲ್ಲಿ ತಮ್ಮ ಮೂಲಕ ಸರ್ಕಾರಕ್ಕೆ ಕೊಡುವುದಕ್ಕೆ ಇಷ್ಟಪಡುತ್ತೇನೆ. ಮೊಟ್ಟಮೊದಲನೆಯದಾಗಿ, ಸರ್ಕಾರದವರು ಕೋಮುಗಲಭೆ ವಿಚಾರದಲ್ಲಿ ಕ್ರಮ ಕೈಗೊಂಡಿರುವುದಕ್ಕಾಗಿ ನಮ್ಮ ಮುಖ್ಯಮಂತ್ರಿಗಳಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಬಹಳ ವರ್ಷಗಳಿಂದಲೂ ಸಹ ಪೋಲೀಸ್ ಇಲಾಖೆಯಲ್ಲಿ ಹೆಚ್ಚಿನ ಮಟ್ಟದಲ್ಲಿ ರೆಕ್ರೂಟ್‌ಮೆಂಟ್ ಮಾಡುವುದಾಗಲೀ ಅಥವಾ ಅವರಿಗೆ ಬೇಕಾದಂಥ ಸೌಲಭ್ಯಗಳನ್ನು ಕೊಡುವುದಾಗಲೀ ರಾಜ್ಯದಲ್ಲಿ ಮಾಡಿರಲಿಲ್ಲ, ಇವತ್ತಿನ ದಿವಸ ಸರ್ಕಾರ ಅದಕ್ಕಾಗಿ ವಿಶೇಷವಾದ ರೀತಿಯಲ್ಲಿ ಒಂದು ಕಾರ್ಯಕ್ರಮವನ್ನು ಹಾಕಿಕೊಂಡಿದೆ. ಮೊಟ್ಟಮೊದಲನೆಯದಾಗಿ, ಬಹಳ ವರ್ಷಗಳ ನಂತರ ಪೋಲೀಸ್ ಸ್ಟೇಷನ್ಗಳನ್ನು ಕೂಡ ಹೆಚ್ಚಿಗೆ ಮಾಡಬೇಕೆಂದು ಕಾರ್ಯಕ್ರಮ ಹಾಕಿಕೊಂಡಿದೆ. ಅದಕ್ಕಾಗಿ ಸಹ ಸರ್ಕಾರವನ್ನು ನಾನು ಅಭಿನಂದಿಸುತ್ತಿದ್ದೇನೆ. ಇದರ ಜೊತೆಗೆ ಬಾರ್ಡರ್ ಏರಿಯಾದಲ್ಲಿ ಅಂದರೆ ಪಾವಗಡ ಇರಬಹುದು, ಚಿಂಚೋಳಿ ಇರಬಹುದು, ಇಂತಹ ಅನೇಕ ಬಾರ್ಡರ್ ಏರಿಯಾ ತಾಲ್ಲೂಕುಗಳಲ್ಲಿ ನಕ್ಷಲೈಟ್ಸ್, ಆಕ್ಟಿವಿಟೀಸ್ ಆಗುತ್ತಿದೆ, ಆದಕ್ಕಾಗಿ ವಿಶೇಷ ಕಾರ್ಯಕ್ರಮವನ್ನು ಸರ್ಕಾರದವರು ಹಾಕಿಕೊಂಡಿದ್ದಾರೆ. ಅದಕ್ಕಾಗಿ ಸರ್ಕಾರವನ್ನು ನಾನು ಶ್ಲಾಘಿಸುತ್ತಿದ್ದೇನೆ. ಒಂದು ವಿಚಾರದಲ್ಲಿ ಸಲಹೆಯನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ವಿದ್ಯಾ ಕ್ಷೇತ್ರದಲ್ಲಿ ಬಹಳಷ್ಟು ಹೆಚ್ಚಿನ ತಪ್ಪುಗಳನ್ನು ಬಹುಶಃ ನೀತಿ ಮಾಡತಕ್ಕವರು ಮಾಡಿದ್ದಾರೆಂದರೆ ತಪ್ಪಾಗಲಾರದು. ಒಂದು ಉದಾಹರಣೆ ಕೊಡುತ್ತಿದ್ದೇನೆ. ಆಪರೇಷನ್ ಬ್ಲಾಕ್ ಬೋರ್ಡ್ ಎಂಬ ಒಂದು ಬಹಳ ಮಹತ್ತರವಾದ ಸ್ಕೀಮನ್ನು ಕೇಂದ್ರ ಸರ್ಕಾರದವರು ಮಾಡಿದ್ದಾರೆ. ಅದರಲ್ಲಿ ಬಹಳಷ್ಟು ಕಡೆ ಅವ್ಯವಹಾರಗಳಾಗಿವೆ. ಬಹಳಷ್ಟು ಕಡೆ ಅದಕ್ಕೆ ಸಿಗಬೇಕಾದ ಪ್ರಾಮುಖ್ಯತೆ ಸಿಗುತ್ತಿಲ್ಲ. ಒಂದು ಉದಾಹರಣೆ ನಿಮಗೆ ಹೇಳುತ್ತೇನೆ. ನನ್ನದೋ ಆದ ಕ್ಷೇತ್ರದಲ್ಲಿ ಕಳೆದ ಎರಡು ವರ್ಷಗಳಿಂದ ಬ್ಲಾಕ್‌ಬೋರ್ಡ್ ಆಪರೇಷನ್ ಸ್ಕೀಂ ನಡೆಯುತ್ತಿದೆ. 167 ಶಾಲಾ ಕಟ್ಟಡಗಳನ್ನು ತೆಗೆದುಕೊಳ್ಳಬೇಕೆಂದು ಕಳೆದ ಎರಡು ವರ್ಷಗಳಿಂದ ಪ್ರಯತ್ನ ನಡೆಸುತ್ತಿದ್ದಾರೆ. ಆದರೆ ಅದಕ್ಕೆ ಹಣವನ್ನು ಕೊಟ್ಟಿರತಕ್ಕದ್ದು

ನೋಡಿದರೆ ಬಹಳ ಬೇಜಾರಾಗುತ್ತದೆ. ಏಕೆಂದರೆ, ಯಾವ ಒಂದು ಕ್ಷೇತ್ರಕ್ಕೆ ಪ್ರಾಮುಖ್ಯತೆಯನ್ನು ನಾವು ಕೊಡಬೇಕಾಗಿದೆ ಅದು ಕೊಟ್ಟಿಲ್ಲ. ವಿದ್ಯಾ ಕ್ಷೇತ್ರಕ್ಕೆ ಹೆಚ್ಚು ಪ್ರಾಮುಖ್ಯತೆಯನ್ನು ಕೊಡಬೇಕಾಗುತ್ತದೆ. ಪ್ರೈಮರಿ, ಸೆಕಂಡರಿ ಎಜುಕೇಷನ್‌ಗೆ ಹೆಚ್ಚು ಪ್ರಾಮುಖ್ಯತೆ ಸಿಗುತ್ತಿಲ್ಲ. ನನ್ನ ಕ್ಷೇತ್ರದಲ್ಲಿ 167 ಶಾಲಾ ಕಟ್ಟಡಗಳಲ್ಲಿ 10 ಶಾಲಾ-ಕಟ್ಟಡಗಳನ್ನು ಸಹ ಮಾಡಿಲ್ಲ ಅದಕ್ಕೆ ಎಷ್ಟು ಹಣ ಇಟ್ಟಿದ್ದರು ಅದನ್ನು ಬೇರೆಯದಕ್ಕೆ ಖರ್ಚು ಮಾಡಿ ಜಾಲ್ಲಾಪರಿಷತ್ತಿನವರು ಅದನ್ನು ದುಪಯೋಗಪಡಿಸಿಕೊಂಡಿದ್ದಾರೆಂದರೆ ತಪ್ಪಾಗಲಿಕ್ಕಿಲ್ಲ. ಒಂದು ವಿಚಾರದಲ್ಲಿ ಮತ್ತೊಂದು ಸಲಹೆಯನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ಬಹಳ ದಿವಸಗಳಿಂದ ಯೂನಿವರ್ಸಿಟಿ ಎಜುಕೇಷನ್‌ನಲ್ಲಿ ಸಿಬಸ್ ಛೇಂಜ್ ಮಾಡಿಲ್ಲ. ಇಂಜಿನಿಯರಿಂಗ್ ಕಾಲೇಜು ಇರಬಹುದು. ಮೆಡಿಕಲ್ ಕಾಲೇಜು ಇರಬಹುದು, ಡಿಗ್ರಿ ಕಾಲೇಜು ಇರಬಹುದು. ಹೀಗೆ ಯಾವುದೇ ಕೋರ್ಸ್‌ನಲ್ಲಿ ಬಹಳ ದಿವಸಗಳಿಂದ ಸಿಲಬಸ್ ಛೇಂಜ್ ಮಾಡಿಲ್ಲ. ಅದನ್ನು ಸರ್ಕಾರ ಬಹಳ ಶೀಘ್ರವಾಗಿ ಗಣನೆಗೆ ತೆಗೆದುಕೊಂಡು ಬದಲಾವಣೆ ಮಾಡಿದರೆ ಒಳ್ಳೆಯದೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಕೊನೆಯಪಕ್ಷ ಐದು ವರ್ಷಕ್ಕೊಮ್ಮೆಯಾದರೂ ಸಿಲಬಸ್ ಮಾಡಿದರೆ ಒಳ್ಳೆಯದಾಗುತ್ತದೆ, ವಿದ್ಯಾಕ್ಷೇತ್ರದಲ್ಲಿ ಉತ್ತಮ ಮಟ್ಟ ಗಳಿಸುವುದಕ್ಕೆ ಆಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇವತ್ತಿನ ದಿವಸ ಓಪನ್ ಯೂನಿವರ್ಸಿಟಿಗಳನ್ನು ಮಾಡಬೇಕೆಂದು ಮಹತ್ತರವಾದ ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆ. ನಿಜವಾಗಿಯೂ ಇದು ಬಹಳ ಒಳ್ಳೆಯದು. ಏಕೆಂದರೆ ಯಾರಾದರೂ ಕೆಲಸ ಮಾಡುತ್ತಿದ್ದರೆ, ಒಂದು ವೃತ್ತಿಗೆ ಸೇರಿದರೆ ಹೆಚ್ಚಿನಮಟ್ಟದಲ್ಲಿ ವಿದ್ಯಾಭ್ಯಾಸವನ್ನು ಮಾಡಬೇಕೆಂಬ ವಿಚಾರ ಇದ್ದರೆ ಅವರಿಗೆ ವಿದ್ಯಾಭ್ಯಾಸ ಮಾಡಲು ಅವಕಾಶ ಸಿಗುತ್ತದೆ. ಆದ್ದರಿಂದ ಓಪನ್ ಯೂನಿವರ್ಸಿಟಿ ಮಾಡುವುದು ಒಳ್ಳೆಯದೆಂದು ಹೇಳಿ ಸರ್ಕಾರ ಏನು ಹೊರಟಿದೆ ಅದಕ್ಕೆ ಅಂಬೇಡ್ಕರ್ ಯೂನಿವರ್ಸಿಟಿ ಎಂದು ಹೆಸರು ಇಡಬೇಕು. 1990-91 ಮತ್ತು 1992 ರಲ್ಲಿ ಡಾಕ್ಟರ್ ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಜನ್ಮ ಶತಾಬ್ಧಿಯನ್ನು ಆಚರಣೆ ಮಾಡುತ್ತಿದ್ದೇವೆ.

ಈ ಸಂದರ್ಭದಲ್ಲಿ ಓಪನ್ ಯೂನಿವರ್ಸಿಟಿ ಏನು ಇದೆ ಅದಕ್ಕೆ ಡಾ॥ ಬಾಬಾ ಸಾಹೇಬ್ ಅಂಬೇಡ್ಕರ್‌ರವರ ಹೆಸರನ್ನು ಇಡಬೇಕೆಂದು ನಾನು ಸರ್ಕಾರಕ್ಕೆ ಸಲಹೆಯನ್ನು ತಮ್ಮ ಮೂಲಕ ತಿಳಿಸುತ್ತಿದ್ದೇನೆ. ಮತ್ತೆ ಕೃಷಿ ವಿಶ್ವವಿದ್ಯಾನಿಲಯದಲ್ಲಿ ಕೂಡಾ ಬಹಳ ಮಹತ್ತರವಾದ ಬದಲಾವಣೆಯನ್ನು ಸರ್ಕಾರ ಹಮ್ಮಿಕೊಂಡಿದೆ. ಈಗಾಗಲೇ ಮಂಡ್ಯ ಮತ್ತು ಮೂಡಿಗೆರೆಯಲ್ಲಿ ಮುಂದಿನ ವರ್ಷ 2 ಕಾಲೇಜುಗಳನ್ನು ಮಾಡಬೇಕೆಂದು ಸರ್ಕಾರ ಕಾರ್ಯಕ್ರಮ ಹಾಕಿಕೊಂಡಿದೆ. ಈ ವಿಚಾರದಲ್ಲಿ ನಾನು ಕೆಲವು ಸಲಹೆಗಳನ್ನು ಕೊಡುತ್ತೇನೆ. 1982ರಿಂದ ಇಲ್ಲಿಯವರೆಗೆ ಅಗ್ರಿಕಲ್ಚರ್ ಗ್ರಾಜ್ಯುಯೇಟ್ಸ್ ರೆಕ್ರೂಟ್ ಆಗಿಲ್ಲ. ತಾವು ನೂರಾರು ಜನ ಅಗ್ರಿಕಲ್ಚರ್ ಗ್ರಾಜ್ಯುಯೇಟ್ಸ್ ಅನ್ನು ತಯಾರು ಮಾಡಿದ್ದೀರಿ. ಆದರೆ ಅವರೆಲ್ಲ ಎಲ್ಲಿ ಹೋಗಿದ್ದಾರೆ? ಅವರಿಗೆ ಎಲ್ಲಿ ಉದ್ಯೋಗಾವಕಾಶ ಸಿಗುತ್ತದೆ? ಇವತ್ತು ನಾವು ಬಹಳಷ್ಟು ಮಟ್ಟಿಗೆ ರೈತರ ಬಗ್ಗೆ ಮಾತನಾಡುತ್ತೇವೆ, ಬಹಳ ಮಟ್ಟಿಗೆ ಕೃಷಿ ಬಗ್ಗೆ ಮಾತನಾಡುತ್ತೇವೆ. ಆದರೆ ಕೃಷಿ ವಿದ್ಯೆಯನ್ನು ಕಲಿತು ಯಾರು ಪದವೀಧರರಾಗಿ ಹೊರಬರುತ್ತಾರೆ ಅವರಿಗೆ ಅವಕಾಶ ಸಿಕ್ಕದೇ ಇದ್ದರೆ, ನಾವು ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿ ಏನು ಟ್ರೈನಿಂಗ್ ಕೊಟ್ಟಿದ್ದೇವೆ. ಅದು ಉಪಯೋಗಕ್ಕೆ ಬರುವುದಿಲ್ಲ ಎಂದು ಹೇಳುತ್ತಾ, ಕಾಲೇಜುಗಳನ್ನು ನಿರ್ಮಾಣ ಮಾಡುವುದು ಅಷ್ಟೇ ಅಲ್ಲ, ಅದರ ಜೊತೆ ಅವರು ಕಲಿತ ವಿದ್ಯೆಯನ್ನು ಉಪಯೋಗಿಸತಕ್ಕ ಕಾರ್ಯಕ್ರಮ ವನ್ನು, ಸರ್ಕಾರ ಹಾಕಿಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಈ ಸಮಯದಲ್ಲಿ ಒಂದು ವಿಚಾರವನ್ನು ಹೇಳದೇ ಇದ್ದರೆ ತಪ್ಪಾಗುತ್ತದೆ. ಈಗ ಬೆಂಗಳೂರಿನಲ್ಲಿ ಕೃಷಿ ವಿಶ್ವವಿದ್ಯಾನಿಲಯ ಏನು ಇದೆ ಅಲ್ಲಿ ಬಹಳ ದೊಡ್ಡ ರೀತಿಯಲ್ಲಿ ತಪ್ಪುಗಳು ಆಗುತ್ತಿದೆ. ಈಗಿರತಕ್ಕ ವೈಸ್‌ಛಾನ್ಸ್‌ಲರ್

ಅವರು ಬಹಳ ಅಧಿಕಾರ ದುರುಪಯೋಗಪಡಿಸಿಕೊಳ್ಳುತ್ತಿದ್ದಾರೆ, ಅಲ್ಲಿ ಜಾತೀಯ ರಾಜಕೀಯ ನಡೆಯುತ್ತಿದೆ. ಮೊನ್ನೆ ಅಲ್ಲಿ ವಿದ್ಯಾರ್ಥಿಗಳು ಬಹಳ ಹೆಚ್ಚಿನ ಮಟ್ಟದಲ್ಲಿ ಪ್ರತಿಭಟನೆ ವ್ಯಕ್ತ ಮಾಡಿದ್ದಾರೆ. ನಾನು ಸಹ ಅಲ್ಲಿ ಕಳೆದ 5 ವರ್ಷಗಳಿಂದ ಆಡಳಿತ ಮಂಡಲಿಯ ಸದಸ್ಯರಾಗಿ ನೋಡಿದ್ದೇನೆ. ಸರ್ಕಾರದ ಆದೇಶಗಳು, ಸರ್ಕಾರದ ಆಜ್ಞೆಗಳು ಏನು ಇರುತ್ತದೋ ಅದನ್ನು ಯಾವುದೇ ರೀತಿಯಲ್ಲಿ ಅಲ್ಲಿ ಗಣನೆಗೆ ತೆಗೆದುಕೊಳ್ಳುವುದಿಲ್ಲ. ಮತ್ತೆ ಇಲ್ಲಿ ಸ್ವಲ್ಪ ಸರ್ಕಾರದ ತಪ್ಪು ಕೂಡಾ ಇದೆ ಎಂದು ಹೇಳಬೇಕಾಗುತ್ತದೆ. ಕಳೆದ 4 ವರ್ಷಗಳಿಂದ ಅಲ್ಲಿ ಆಫೀಸರ್ಸ್ ಕೇಡರ್‌ನಲ್ಲಿ ಇರುವವರನ್ನೇ ಇನ್‌ಛಾರ್ಜ್ ಇಟ್ಟಿರುತ್ತಾರೆ. ದೊಡ್ಡ ದೊಡ್ಡ ಅಧಿಕಾರದಲ್ಲಿ ಇನ್‌ಛಾರ್ಜ್ ಮೂಲಕ ಕೆಲಸ ನಿರ್ವಹಿಸುತ್ತಿರುವುದರಿಂದ ಯಾರೂ ಕೂಡಾ ಜವಾಬ್ದಾರಿ ತೆಗೆದುಕೊಳ್ಳುವುದಕ್ಕೆ ಹೋಗುವುದಿಲ್ಲ. ಆದುದರಿಂದ ಅತಿ ಶೀಘ್ರವಾಗಿ ಸರ್ಕಾರ ಈ ಬಗ್ಗೆ ಕ್ಲಿಯರೆನ್ಸ್ ಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನು ನ್ಯಾಷನಲ್ಸ್ ಸೆಂಟರ್ ಫಾರ್ ವಾಟರ್‌ಶೆಡ್ ಪ್ರೋಗ್ರಾಮ್ ಎಂದು ಹಾಕಿದ್ದಾರೆ. ಕೃಷಿ ಇಲಾಖೆಯಲ್ಲಿ ಇದಕ್ಕೆ ಸೆಲೆಕ್ಷನ್ ಹೇಗೆ ನಡೆಯುತ್ತದೆ ಎಂದರೆ, ಯಾರು ಅವರಿಗೆ ಕಾಗದ ಕೊಡುತ್ತಾರೋ, ಯಾರು ಅವರನ್ನು ಪರ್ಸನಲ್ಲಾಗಿ ಮೀಟ್ ಮಾಡಿ ಏನೆಲ್ಲಾ ಸೌಲತ್ತುಗಳನ್ನು ಅವರಿಗೆ ನೀಡುತ್ತಾರೋ ಅಂತಹವರ ತಾಲ್ಲೂಕಿಗೆ ಮಾತ್ರ ಈ ಪ್ರೋಗ್ರಾಮ್‌ನ ಸೌಲಭ್ಯ ಸಿಗುತ್ತದೆ. ಇದಕ್ಕೆ ಯಾವುದೇ ಒಂದು ರೀತಿಯ ಕಾರ್ಯಕ್ರಮ ಅಲ್ಲ. ಇದಕ್ಕೆ ಯಾವುದೇ ರೀತಿಯ ಗೈಡ್‌ಲೈನ್ಸ್ ಇಲ್ಲ. ಅದು ಯುವುದೇ ಜಿಲ್ಲೆಯಾಗಲಿ, ಯಾವುದೇ ತಾಲ್ಲೂಕಾಗಲಿ ಗೈಡ್‌ಲೈನ್ಸನ್ನು ಇಟ್ಟುಕೊಂಡು ಮಾಡಿದರೆ ಬಹಳ ಒಳ್ಳೆಯದಾಗುತ್ತದೆಂದು ಹೇಳುತ್ತೇನೆ. ಇನ್ನೊಂದು ಭಹಳ ಅಂಬಿಷಿಯಸ್ ಪ್ಲಾನ್ ಎಂದರೆ ತಪ್ಪಾಗಲಿಕ್ಕಿಲ್ಲ. ಅದೇನೆಂದರೆ 30 ಪರ್ಸೆಂಟ್ ಹೆಣ್ಣುಮಕ್ಕಳಿಗೆ ಎಲ್ಲಾ ಉದ್ಯೋಗಗಳಲ್ಲಿ ರಿಸರ್ವೇಷನ್ ಇಡುತ್ತೇವೆ ಎಂದು ಹೇಳಿದ್ದಾರೆ. ಮಾನ್ಯ ಅಧ್ಯಕ್ಷರೇ, ನಾನು ಮೊನ್ನೆ ಒಂದು ಪ್ರಶ್ನೆ ಕೇಳಿದ್ದೆ. ಸುಮಾರು ಎರಡೂವರೆ ಲಕ್ಷ ಹೆಣ್ಣು ಮಕ್ಕಳು ಕರ್ನಾಟಕದಲ್ಲಿ ಉದ್ಯೋಗ ಮಾಡುತ್ತಿದ್ದಾರೆ. ಅದರಲ್ಲಿ ಹಾಸ್ಟೆಲ್‌ನಲ್ಲಿರತಕ್ಕವರು ಅಥವಾ ಹಾಸ್ಟೆಲ್ ಬೇಕು ಎಂದು ಕೇಳುತ್ತಿರುವವರು ಸುಮಾರು 8 ಸಾವಿರ ಜನರು ಇದ್ದಾರೆ. ಇದು ಕೇಂದ್ರ ಸರ್ಕಾರಿ ತಯಾರು ಮಾಡಿರತಕ್ಕ ಸ್ಟಾಟಿಸ್ಟಿಕ್ಸ್. ಇದರಲ್ಲಿ ನಾವು ಕರ್ನಾಟಕದಲ್ಲಿ ಸುಮಾರು 3 ಸಾವಿರ ಹೆಣ್ಣುಮಕ್ಕಳಿಗೆ ಹಾಸ್ಟೆಲ್ ಸೌಕರ್ಯವನ್ನು ಒದಗಿಸಿದ್ದೇವೆ. ಕಳೆದ ಸಾಲಿನಲ್ಲಿ ಅಂದರೆ 1990-91ರಲ್ಲಿ ಕೇಂದ್ರ ಸರ್ಕಾರದವರು 6 ಕೋಟಿ ರೂಪಾಯಿಗಳನ್ನು ಇಟ್ಟಿದ್ದರು. ಈ ಬಗ್ಗೆ ನೀವು ಪ್ರಪೋಸಲ್ ಕಳುಹಿಸಿಕೊಡಿ, ನಾವು ಹಣವನ್ನು ಕೊಡುತ್ತೇವೆ ಎಂದು 1990-91 ಕ್ಕೆ 6 ಕೋಟಿ ರೂಪಾಯಿಗಳನ್ನು ಇಟ್ಟಿದ್ದಾರೆ. ಆದರೆ ನಮ್ಮ ದುರಾದೃಷ್ಟ, ಎಷ್ಟರಮಟ್ಟಿಗೆ ಈ ಇಲಾಖೆ ಕೆಲಸ ಮಾಡಿದೆ ಎಂದರೆ, ಒಂದೂ ಪ್ರಪೋಸಲ್‌ನ್ನು ಇದುವರೆವಿಗೂ ಕಳುಹಿಸಿಕೊಟ್ಟಿಲ್ಲ. ಇದರಿಂದಾಗಿ ಕೇಂದ್ರದಿಂದ ನಮಗೆ ಬರತಕ್ಕ 6 ಕೋಟಿ ರೂಪಾಯಿ ನಷ್ಟ ಆಗಿದೆ.

ಅಲ್ಲಿ ಇಲಾಖೆ ಯಾವ ರೀತಿ ಕೆಲಸ ಮಾಡುತ್ತಿದೆಯೋ ಏನೋ ಗೊತ್ತಿಲ್ಲ. ಅನೇಕ ಅರ್ಜಿಗಳು ಅವರ ಹತ್ತಿರ ಬಿದ್ದಿವೆ. ಡಿಸ್ಟ್ರಕ್ಟ್ ಆಫೀಸರ್ಸ್ ಏನು ಇದ್ದಾರೆ ಅವರು ರೆಕಮೆಂಡ್ ಮಾಡಿದರೂ ಕೂಡ ಆ ಅರ್ಜಿಗಳನ್ನು ಕಳಿಸಿಲ್ಲ. ಎಷ್ಟರಮಟ್ಟಿಗೆ ಇದು ನಡೆದಿದೆ ಎಂದರೆ, ಕೇಂದ್ರ ಸರ್ಕಾರದವರೇ ಇವರಿಗೆ ಪತ್ರ ಬರೆದಿದ್ದಾರೆ. ಇಟ್ಟಿರತಕ್ಕಂತಹ ಹಣವನ್ನು ಉಪಯೋಗಿಸಿಕೊಳ್ಳಿ, ಅತಿ ಶೀಘ್ರವಾಗಿ ಪ್ರಪೋಸಲ್‌ಗಳನ್ನು ಕಳಿಸಿಕೊಡಿ ಎಂದು ರಿಮೈಂಡರ್‌ಗಳನ್ನು ಹಾಕಿದ್ದರೂ ಕೂಡ ಇವತ್ತಿನವರೆಗೂ ಇಲ್ಲಿಂದ ಯಾವ ಪ್ರಪೋಸಲ್‌ಗಳೂ ಹೋಗಿಲ್ಲ. ಹಾಗಿರುವಾಗ 30 ಪರ್ಸೆಂಟ್ ರಿಸರ್ವೇಷನ್ ಅನ್ನು ಮಹಿಳೆಯರಿಗೆ ನೀಡುತ್ತೇವೆ, ಹೆಣ್ಣು ಮಕ್ಕಳಿಗೆ ಕೆಲಸ ಕೊಡುತ್ತೇವೆಂದು ಹೇಳಿದರೆ ಯಾರಾದರೂ ನಗುತ್ತಾರೆಂದು ಹೇಳುತ್ತೇನೆ. ಏಕೆಂದರೆ ಅವರಿಗೆ ಸವಲತ್ತುಗಳನ್ನು

ಕೊಡುವುದಿಲ್ಲ, ಅವಕಾಶಗಳನ್ನು ಕೊಡುವುದಿಲ್ಲ, ಆದರೆ 30 ಪರ್ಸೆಂಟ್ ರಿಸರ್ವೇಷನ್ ಮಾಡುತ್ತೇವೆಂದು ಹೇಳಿದಾಗ, ಸರಕಾರ ಯಾವರೀತಿ ಮಾಡುತ್ತಿದೆ ಎಂದು ಹೇಳುವುದಾದರೆ, ಹೆಣ್ಣು ಮಕ್ಕಳ ಬಗ್ಗೆ ಸರಿಯಾದಂತಹ ರೀತಿಯಲ್ಲಿ ಯೋಚನೆ ಮಾಡದೇ ಇರುವುದು ಅತ್ಯಂತ ಶೋಚನೀಯ. ಇನ್ನು ಡಾಕ್ಟರ್ ಬಾಬಾ ಸಾಹೇಬ್ ಅಂಬೇಡ್ಕರ್‌ರವರ ಸೆಂಟಿನರಿಯನ್ನು ಆಚರಣೆ ಮಾಡುತ್ತಿದ್ದೇವೆ. ಕಳೆದ ಸಾರಿ ನಾನು ಇದೇ ಪ್ರಶ್ನೆಯನ್ನು ಸದನದಲ್ಲಿ ಎತ್ತಿದ್ದೆ. ಬರೀ ಹಾರ, ತುರಾಯಿಗಳನ್ನು ಹಾಕುವುದು ಬೇಡ, ಕಾರ್ಯಕ್ರಮಗಳನ್ನು ಮಾಡಿ ಭಾಷಣಗಳನ್ನು ಮಾಡುವುದು ಬೇಡ, ಅದರ ಬದಲು ಪ್ರತಿ ತಾಲ್ಲೂಕಿನಲ್ಲಿ ಒಂದೊಂದು ಹಾಸ್ಟೆಲ್‌ನ್ನು ಮಾಡಿ ಎಸ್.ಸಿ,ಎಸ್.ಟಿ. ವಿದ್ಯಾರ್ಥಿಗಳಿಗೆ ಜಿಲ್ಲಾ ಹೆಡ್ ಕ್ವಾರ್ಟರ್ಸ್‌ಗಳಲ್ಲಿ ಹಾಸ್ಟೆಲ್‌ಗಳನ್ನು ಮಾಡಿ ಕೊಡಿ. ಮತ್ತು ಅವರಿಗೆ ಬೇಕಾದಂತಹ ಸವಲತ್ತುಗಳು ಅವರಿಗೆ ಸರಿಯಾದ ರೀತಿಯಲ್ಲಿ ಸಿಕ್ಕುವ ಹಾಗೆ ಮಾಡಿ. ನಮಗೆ ಸ್ವಾತಂತ್ರ್ಯ ಬಂದು 43 ವರ್ಷಗಳಾಗಿದೆ. ಆದರೂ ಕೂಡ 18 ಪರ್ಸೆಂಟ್ ಅನ್ನು ತುಂಬುವುದಕ್ಕೆ ಆಗಿಲ್ಲ.

ಅನೇಕ ಅಧಿಕಾರಿಗಳು ಎಕ್ಸ್‌ಕ್ಯೂಸನ್ನು ಕೊಡುತ್ತಾರೆ. ಅನೇಕ ಡಿಪಾರ್ಟ್‌ಮೆಂಟ್‌ಗಳಲ್ಲಿ ಎಕ್ಸ್‌ಕ್ಯೂಸನ್ನು ಕೊಡುತ್ತಾರೆ. ಇದಕ್ಕೆ ಒಂದು ಕಾಂಪ್ರೆಹೆನ್ಸೀವ್ ರಿವ್ಯೂ ಮಾಡಿ. ಯಾವ್ಯಾವ ಇಲಾಖೆಯಲ್ಲಿ 18 ಪರ್ಸೆಂಟ್ ಫಿಲಪ್ ಆಗಿಲ್ಲ ಯಾವ್ಯಾವ ಕೇಡರ್‌ನಲ್ಲಿ ಆಗಿಲ್ಲ ಎಂಬುದರ ಬಗ್ಗೆ ಒಂದು ಕಾಂಪ್ರೆಹೆನ್ಸೀವ್ ರಿವ್ಯೂ ಮಾಡಿ ಕಾಂಪ್ರಹೆನ್ಸೀವ್ ಆಗಿ ಪ್ರಾಜೆಕ್ ಮಾಡಿ ಒಂದು ವರ್ಷದ ಅವಧಿಯೊಳಗೆ 18 ಪರ್ಸೆಂಟ್ ಅನ್ನು ತುಂಬಿಸುತ್ತೇವೆ. ಇಲ್ಲವಾದರೆ ಆರು ತಿಂಗಳಲ್ಲಿ ತುಂಬಿಸುತ್ತೇವೆಂದು ಹೇಳಿ ಏನಾದರೂ ಕಾರ್ಯಕ್ರಮವನ್ನು ಮಾಡಿದರೆ ಆಗ ಜನ್ಮ ಶತಾಬ್ದಿಗಳಿಗೆ ಅರ್ಥ ಬರುತ್ತದೆ ಎಂದು ನಾನು ಅಂದುಕೊಂಡಿದ್ದೇನೆ. ಇನ್ನು ನಮ್ಮಲ್ಲಿ 35ಅಥವಾ 38ರಿಸರ್ವ್ಡ್ ಕಾನ್‌ಸಿಟಿಟ್ಯುಯೆನ್ಸಿಸ್ ಇದೆ. ಅಲ್ಲಿ ಬಹಳಷ್ಟು ಮಟ್ಟಿಗೆ ಹರಿಜನ - ಗಿರಿಜನರು ಅಥವಾ ಹಿಂದುಳಿದ ವರ್ಗದವರು ಇದ್ದಾರೆ. ಪ್ಲಾನ್ ಅಲೋಕೇಷನ್ ಮಾಡುವಾಗ ಎಲ್ಲಾ ತಾಲ್ಲೂಕುಗಳಿಗೆ ಅಥವಾ ಎಲ್ಲಾ ಜಿಲ್ಲೆಗಳಿಗೆ ಕೊಟ ಹಾಗೆ ಇದಕ್ಕೂ ನೀಡಿದರೆ ಬಹುಶ: ಆ ಜನರಿಗೆ ಏನು ಹೆಚ್ಚಿನ ಸವಲತ್ತು ಕೊಡಬೇಕಾಗುತ್ತದೆ, ಆ ಜನರನ್ನು ಸಾಮಾಜಿಕವಾಗಿ ಏನು ಮೇಲೆ ತರಬೇಕಾಗುತ್ತದೆ ಅದನ್ನು ಮಾಡಲಿಕ್ಕೆ ಆಗುವುದಿಲ್ಲ. ಆದುದರಿಂದ ಸರ್ಕಾರ ಇದನ್ನು ಗಮನದಲ್ಲಿಟ್ಟುಕೊಂಡು ಆ ಒಂದು ಕ್ಷೇತ್ರಗಳು ಏನು ಇವೆ ಅಥವಾ ಯಾವ್ಯಾವ ಏರಿಯಾಗಳಲ್ಲಿ ಹೆಚ್ಚಿನ ಮಟ್ಟದಲ್ಲಿ ಈ ಜನರು ವಾಸವಾಗಿದ್ದಾರೆ ಅಂತಹ ಏರಿಯಾಗಳಿಗೆ ಏನಾದರೂ ವಿಶೇಷ ಪ್ರೋಗ್ರಾಂಗಳನ್ನು ಮಾಡುವ ಮೂಲಕ ಆ ಜನರನ್ನು ಸಮಾಜದ ಒಂದು ಸಮಾನತೆಗೆ ತರದೇ ಹೋದರೆ ಬಹಳ ತಪ್ಪಾಗುತ್ತದೆ. ಅಲ್ಲಿ ಸೋಷಿಯಲ್ ಎಕನಾಮಿಕ್ ಪ್ರಾಬ್ಲಮ್ಸ್ ಹಾಗೇ ಮುಂದುವರಿಯುತ್ತದೆ. ಉದಾಹರಣೆಗೆ ಹೇಳುವುದಾದರೆ, ಪಾವಗಡದಲ್ಲಿ ಕೂಲಿ ಕೊಡಬೇಕಾದರೆ ಒಂದು ದಿವಸಕ್ಕೆ 2 ರೂಪಾಯಿ ಕೊಡುತ್ತಿದ್ದಾರೆ. ಇದೇ ಕೆಲಸಕ್ಕೆ ಬೇರೆ ಕಡೆ 15 - 20 ರೂಪಾಯಿಗಳನ್ನು ಕೊಟ್ಟರೆ ಇಲ್ಲಿ ಒಂದು ದಿವಸಕ್ಕೆ ಎರಡು ರೂಪಾಯಿ ಕೂಲಿ ಕೊಡತಕ್ಕ ವ್ಯವಸ್ಥೆ ಇವತ್ತಿನವರೆಗೂ ಇದೆ. ಕಳೆದ ಸಾರಿ ಮಾನ್ಯ ವೀರೇಂದ್ರ ಪಾಟೀಲರು ಇದ್ದಾಗ ಸ್ಪೆಷಲ್ ಪ್ರೋಗ್ರಾಂ ಅನ್ನು ಮಾಡಿಸಿ ಈ ಕ್ಷೇತ್ರದಲ್ಲಿ ಸೋಷಿಯೊ ಎಕನಾಮಿಕ್ ಪ್ರಾಬ್ಲಂ ಇದೆ. ಅದಕ್ಕಾಗಿ ಹೆಚ್ಚಿನ ಮಟ್ಟದಲ್ಲಿ ದುಡ್ಡು ಕೊಡಬೇಕೆಂದು ಹೇಳಿ ಬಾರ್ಡರ್ ಏರಿಯಾ ಡೆವಲಪ್‌ಮೆಂಟ್‌ಗೆಂದು ಒಂದು ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಆದರೆ ಅದು ಅಲ್ಲಿಗೇ ಮುಗಿಯಲಿಲ್ಲ. ಪಾವಗಡ ತಾಲ್ಲೂಕಿನಲ್ಲಿ ಸೋಷಿಯೋ ಎಕನಾಮಿಕ್ ಪ್ರಾಬ್ಲಂಗೆಂದು 1 ಕೋಟಿ ಕೊಟ್ಟರೆ ನಮ್ಮ ಸಮಸ್ಯೆ ಬಗೆಹರಿಯುವುದಿಲ್ಲ. ಇಡೀ ಕರ್ನಾಟಕ ರಾಜ್ಯದಲ್ಲಿ ಎಲ್ಲೆಲ್ಲಿ ಈ ರೀತಿಯ ಜನಗಳಿದ್ದಾರೆ, ಹಿಂದುಳಿದ ಪ್ರದೇಶಗಳು ಎಲ್ಲಿ ಇವೆ, ಸೋಷಿಯೊ ಎಕನಾಮಿಕ್

ಪ್ರಾಬ್ಲಂಗಳು ಎಲ್ಲಿ ಇವೆ ಅವುಗಳೆಲ್ಲವನ್ನೂ ಐಡೆಂಟಿಫೈ ಮಾಡಬೇಕು. ನಮ್ಮಲ್ಲಿ ಇದಕ್ಕೆಂದು ಮಿಷಿನರಿ ಇದೆ. ಡಿ.ಸಿ.ಸಿ. ಮತ್ತು ಎಲ್ಲಾ ಕಂದಾಯ ಇಲಾಖೆಯವರು ಇದ್ದಾರೆ, ಎಲ್ಲಾ ಇಲಾಖೆಯವರೂ ಇದ್ದಾರೆ ; ನಮಗೆ ಫೀಡ್ ಮಾಡತಕ್ಕಂತಹ ವ್ಯವಸ್ಥೆ ಇದೆ. ಅವರು ಏನೊಂದು ಮಾಹಿತಿಯನ್ನು ನಮಗೆ ಫೀಡ್ ಮಾಡುತ್ತಾರೆ, ಅದರ ಮೇಲೆ ಪ್ಲಾನ್ ಮಾಡಿಕೊಂಡು ಅವರಿಗೆ ಹೆಚ್ಚಿನ ಮಟ್ಟದಲ್ಲಿ ಸೋಷಿಯೊ ಎಕನಾಮಿಕ್ ಪ್ರಾಬ್ಲಮ್ಸ್ ಇದೆ ಅದಕ್ಕೆ ಯಾವ ಪ್ರೋಗ್ರಾಮನ್ನು ಮಾಡಬೇಕೊ ಅದನ್ನು ಮಾಡಬೇಕಾಗುತ್ತದೆ. ಒಂದು ಆಂಬಿಸಿಯಸ್ ಪ್ಲಾನ್‌ನ್ನು ಸರ್ಕಾರ ಹಾಕಿಕೊಂಡಿದೆ. ಪ್ರತಿ ಆರು ತಿಂಗಳಿಗೆ ಒಂದು ಸಾರಿ ನಾವು ಮೆಡಿಕಲ್ ಚೆಕ್ ಆಪ್ ಮಾಡಿಸುತ್ತೇವೆ, ಇಡೀ ನಾಲ್ಕೂವರೆ ಕೋಟಿ ಕನ್ನಡಿಗರಿಗೆ ಪ್ರತಿ ಆರು ತಿಂಗಳಿಗೆ ಒಂದು ಸಾರಿ ಮೆಡಿಕಲ್ ಚೆಕ್‌ಅಪ್ ಮಾಡಿಸುತ್ತೇವೆಂದು ಹೇಳಿದ್ದಾರೆ. ಒಂದು ವಿಚಾರವನ್ನು ನೊಂದ ಮನಸ್ಸಿನಿಂದ ನಾನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಅನೇಕ ತಾಲ್ಲೂಕುಮಟ್ಟಗಳಲ್ಲಿ ಮತ್ತು ಹೊಬಳ್ಳಿ ಮಟ್ಟಗಳಲ್ಲಿರತಕ್ಕ ಅನೇಕ ಆಸ್ಪತ್ರೆಗಳಿಗೆ ಇವತ್ತೂ ಕೂಡ ಒಬ್ಬ ಡಾಕ್ಟರು ಹೋಗಿಲ್ಲ. ಒಂದೊಂದು ಪಬ್ಲಿಕ್ ಹೆಲ್ತ್ ಸೆಂಟರ್ ನಲ್ಲಿ ಡಾಕ್ಟರುಗಳ ಮುಖ ನೋಡಿ ಏಳೆಂಟು ವರ್ಷಗಳಾಗಿದೆ. ಇಂತಹ ಒಂದು ವ್ಯವಸ್ಥೆ ಇರುವಾಗ ನಾವು ಆರು ತಿಂಗಳಿಗೊಮ್ಮೆ ಜನರಿಗೆ ಮೆಡಿಕಲ್ ಚೆಕ್‌ಅಪ್ ಮಾಡಿಸುತ್ತೇವೆಂದರೆ ಇದು ಎಂತಹ ಆಂಬಿಶಿಯಸ್ ಪ್ಲಾನ್ ಎಂದು ಯೋಚನೆ ಮಾಡಬೇಕಾಗಿದೆ. ಮೊಟ್ಟಮೊದಲನೆಯದಾಗಿ, ಡಾಕ್ಟರುಗಳು ಎಲ್ಲೆಲ್ಲಿ ಇಲ್ಲವೋ ಅಲ್ಲಿ ಅಪಾಯಿಂಟ್‌ಮೆಂಟ್ ಮಾಡಿ ; ನಂತರ ಆ ಆಸ್ಪತ್ರೆಗಳಿಗೆ ಎಕ್ವಿಪ್‌ಮೆಂಟ್ ಕೊಡಿ, ಔಷಧಿಗಳನ್ನು ಕೊಡಿ. ಇದನ್ನು ಬಿಟ್ಟು ನೀವು ಆಂಬಿಶಿಯಸ್ ಆಗಿ ಆರು ತಿಂಗಳಿಗೊಮ್ಮೆ ಮೆಡಿಕಲ್ ಚೆಕ್‌ಅಪ್ ಮಾಡಿಸುತ್ತೇವೆಂದರೆ ಅದು ಎಷ್ಟರಮಟ್ಟಿಗೆ ಆಗುತ್ತದೆಂದು ನನಗೆ ಡೌಟ್ ಬರುತ್ತದೆ. ಇನ್ನು ಅಡ್ಮಿನಿಸ್ಟ್ರೇಷನ್ ವಿಚಾರದಲ್ಲಿ ಹೇಳಿದ್ದಾರೆ. ಅದನ್ನು ನಾನು ಸ್ವಾಗತ ಮಾಡುತ್ತೇನೆ. ಸ್ವಾಗತ ಮಾಡಿದರೂ ಕೂಡ ನನಗೆ ಡೌಟ್ ಏನಿದೆ ಅದನ್ನು ಎಕ್ಸ್‌ಪ್ರೆಸ್ ಮಾಡಬೇಕಾಗುತ್ತದೆ. ಇವತ್ತಿನ ದಿವಸ ಬಹಳಷ್ಟು ಜನರು ಐಎಎಸ್ ಅಧಿಕಾರಿಗಳನ್ನು ಬೈಯುತ್ತಾರೆ. ನೀವು ಯಾವ ಆಫೀಸಿಗೆ ಹೋಗಿ, ಪ್ರತಿಯೊಬ್ಬ ನೌಕರರೂ ಕೂಡ ಯಾವುದೇ ರೀತಿಯ ಅಕೌಂಟಬಲಿಟಿ ಇಲ್ಲದೆ ಇವತ್ತಿನ ದಿವಸ ಕೆಲಸ ಮಾಡುತ್ತಿದ್ದಾರೆ.. ಒಂದು ಫೈಲ್ ಒಂದು ಆಫೀಸಿಗೆ ಹೋದರೆ, ಅದು ಯಾವತ್ತು ಅಲ್ಲಿಂದ ಬಿಡಬೇಕು, ಅಲ್ಲಿಂದ ಮತ್ತೊಬ್ಬ ಅಧಿಕಾರಿಗೆ ಒಪೀನಿಯನ್ ಅಥವಾ ಅಪ್ರೂವಲ್‌ಗೆ ಯಾವತ್ತು ಹೋಗುತ್ತದೆ ಎಂದು ಇದನ್ನೆಲ್ಲ ಫಾಲೋಅಪ್ ಮಾಡತಕ್ಕ ವ್ಯವಸ್ಥೆ ನಮ್ಮಲ್ಲಿ ಇಲ್ಲವೇ ಇಲ್ಲ. ಮೊನ್ನೆ ನಮ್ಮ ವಿರೋಧಪಕ್ಷದ ನಾಯಕರು ಹೇಳುತ್ತಿದ್ದರು. ಮುಖ್ಯ ಮಂತ್ರಿಗಳ ಕಛೇರಿಯಲ್ಲಿ 1 ಲಕ್ಷದ 25 ಸಾವಿರ ಫೈಲುಗಳು ಬಿದ್ದಿವೆಯೆಂದು ಹೇಳುತ್ತಿದ್ದರು. ಆ ಮಾಹಿತಿ ಎಷ್ಟರಮಟ್ಟಿಗೆ ಸತ್ಯವೋ ಅಸತ್ಯವೋ ನನಗೆ ಗೊತ್ತಿಲ್ಲ. ಇಷ್ಟರಮಟ್ಟಿಗೆ ಒಂದು ಕಾರಣ ಇದ್ದದ್ದೇ ಆದರೆ ಅದನ್ನು ನಿಜವಾಗಿಯೂ ಬದಲಾವಣೆ ಮಾಡಬೇಕಾಗುತ್ತದೆ. ನಾನು ಈ ಸಂದರ್ಭದಲ್ಲಿ ಮಾನ್ಯ ಮುಖ್ಯ ಮಂತ್ರಿಗಳನ್ನು ಅಭಿನಂದಿಸುತ್ತೇನೆ. ಏಕೆಂದರೆ, ಇದು ಬಹಳ ಕಷ್ಟಕರವಾದುದು. ಇದನ್ನು ಅಷ್ಟು ಸುಲಭವಾಗಿ ಯಾರೂ ಕೂಡ ಬದಲಾವಣೆ ಮಾಡುವುದಕ್ಕೆ ಆಗುವುದಿಲ್ಲ. ಆದರೆ ಅವರು ಏನು ಪ್ರಯತ್ನ ಮಾಡಿದ್ದಾರೆ ಅದಕ್ಕಾಗಿ ನಾನು ಅವರನ್ನು ಅಭಿನಂದಿಸುತ್ತೇನೆ. ಇದನ್ನು ಹೆಚ್ಚಿನ ಮಟದಲ್ಲಿ ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಇಷ್ಟನ್ನು ಹೇಳಿ, ಮಾನ್ಯ ರಾಜ್ಯಪಾಲರ ಭಾಷಣಕ್ಕೆ ನನ್ನ ಅನುಮೋದನೆಯನ್ನು ವ್ಯಕ್ತಪಡಿಸುತ್ತಾ, ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಾಕ್ಕಾಗಿ ತಮಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರ ಅನುಮತಿ ಮೇರೆಗೆ ಪ್ರಸ್ತಾಪ